ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೯೬

ಪ್ರೇರಣೆ

ವಿ. ನಾಗರಾಜಶಾಸ್ತ್ರೀ, ಎಂ.ಎ.

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೯

ಮೈಸೂರು ವಿಶ್ವವಿದ್ಯಾನಿಲಯ
ಪ್ರಚಾರ ಪುಸ್ತಕಮಾಲೆ

೧. ಖಗೋಳಶಾಸ್ತ್ರ ಪ್ರವೇಶ
—ಡಾ॥ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್
೨. ಸಮಾಜದ ರೋಗರುಜಿನಗಳು—ಜಿ. ಹನುಮಂತರಾವ್
೩. ತೆರಿಗೆ—ಬಿ. ಆರ್. ಸುಬ್ಬರಾವ್
೪. ನವರತ್ನಗಳು—ಎಚ್. ಸುಬ್ಬಾಜೋಯಿಸ್
೫. ನಮ್ಮ ಹಳ್ಳಿಗಳು—ಜಿ. ಎನ್. ಕೃಷ್ಣಮೂರ್ತಿ
೬. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೭. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೮. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೯. ವಿದ್ಯುಚ್ಛಕ್ತಿಯ ವೈಭವ—ಬಿ. ಎ. ಕೃಷ್ಣಸ್ವಾಮಿರಾವ್
೧೦. ಪಂಪ—ತೀ. ನಂ. ಶ್ರೀಕಂಠಯ್ಯ
೧೧. ಪ್ರಾಣಿಜೀವನ—ಎ. ನಾರಾಯಣರಾವ್
೧೨. ಕನಸುಗಳು—ಡಾ॥ ಎನ್. ಎಸ್. ನಾರಾಯಣಶಾಸ್ತ್ರೀ
೧೩. ಮದುವೆ—ನಾ. ಕಸ್ತೂರಿ
೧೪. *ನಮ್ಮ ಆರ್ಥಿಕದೃಷ್ಟಿ—ಎಸ್. ಗೋಪಾಲಸ್ವಾಮಿ
೧೫. ವಾಯುಗುಣ—ಕೆ. ಶೇಷಾದ್ರಿ ಅಯ್ಯಂಗಾರ್
೧೬. ಬೆಳಕು—ಟಿ. ಎಸ್. ಸುಬ್ಬರಾಯ
೧೭. ಕರ್ನಾಟಕ ಕಾದಂಬರಿ—ವಿ. ಸೀತಾರಾಮಯ್ಯ
೧೮. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೧೯. ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ–ಪಿ. ಜಿ. ಸತ್ಯಗಿರಿನಾಥನ್
೨೦. ಕಣ್ಣು ಮತ್ತು ಅದರ ರಕ್ಷಣೆ—ಡಿ. ಶಾಮಣ್ಣ
೨೧. ಸಾರ್ವಜನಿಕ ವೆಚ್ಚ—ಡಾ॥ ಎಂ. ಎಚ್. ಗೋಪಾಲ್
೨೨. ಶಿಶುವಿಹಾರಗಳು—ಸಿ. ರಂಗಾಚಾರ್
೨೩. ಸಂಖ್ಯೋದ್ಯಾನ—ಬಿ. ಸೀತಾರಾಮಶಾಸ್ತ್ರೀ
೨೪. ವಿಡಂಬನ—ಎಸ್. ವಿ. ರಂಗಣ್ಣ
೨೫. ಎಲ್ಲೋರ ಮತ್ತು ಅಜಂತ—ಡಾ॥ ಎಂ. ಎಚ್. ಕೃಷ್ಣ

ಮೈಸೂರು ವಿಶ್ವವಿದ್ಯಾನಿಲಯ

ಪ್ರಚಾರ ಪುಸ್ತಕಮಾಲೆ—೯೬

ಪ್ರೇರಣೆ

ವಿ. ನಾಗರಾಜಶಾಸ್ತ್ರೀ, ಎಂ.ಎ.

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೫೯

ಮೊದಲನೆಯ ಮುದ್ರಣ ೧೯೫೯
೩೦೦೦ ಪ್ರತಿಗಳು

ಬೆಲೆ
ಸಾದಾ ಪ್ರತಿ ೨೫ ನಯೆ ಪೈಸೆ
ಉತ್ತಮ ಪ್ರತಿ ೩೭ ನಯೆ ಪೈಸೆ

ಮುದ್ರಕರು:
ಮೈಸೂರು ಯೂನಿವರ್ಸಿಟಿ ಮುದ್ರಣಾಲಯ
ವಿ. ವಿ. ಮೊಹಲ್ಲ, ಮೈಸೂರು.

ಮುನ್ನುಡಿ

ಈ ಪ್ರಚಾರ ಪುಸ್ತಕಮಾಲೆ ಪ್ರಾರಂಭವಾಗಿ ಇಂದಿಗೆ ಸುಮಾರು ಇಪ್ಪತ್ತೈದು ವರ್ಷಗಳಾಗಿವೆ. ಈ ಅವಧಿಯಲ್ಲಿ ೯೫ ಪುಸ್ತಿಕೆಗಳು ಈ ಮಾಲೆಯಲ್ಲಿ ಪ್ರಕಟವಾಗಿವೆ. ಕಾಲಾವಧಿಯನ್ನು ಗಮನಿಸಿದರೆ ಈಗ ಹೊರಬಿದ್ದಿರುವ ಕಿರುಹೊತ್ತಗೆಗಳ ಸಂಖ್ಯೆ ಈಗಿರುವುದಕ್ಕಿಂತಲೂ ದ್ವಿಗುಣವೊ ತ್ರಿಗುಣವೊ ಆಗಿರಬೇಕಾಗಿತ್ತೆಂದು ಹೇಳಬಹುದು. ಆದರೂ ಅವುಗಳ ಗುಣವನ್ನೂ ಅವು ಮಾರಾಟವಾಗುತ್ತಿರುವ ವೇಗವನ್ನೂ ಗಮನಿಸಿದರೆ ಈ ಮಾಲೆಯ ಉಪಯುಕ್ತತೆ ಮತ್ತು ಜನಪ್ರಿಯತೆ ವ್ಯಕ್ತವಾಗುತ್ತದೆ. ಸಾಮಾನ್ಯವಾಗಿ ಪ್ರತಿಯೊಂದು ಪುಸ್ತಿಕೆಯೂ ಮೂರು ನಾಲ್ಕು ಸಾರೆ ಮುದ್ರಿತವಾಗಿದೆ. ದಿನೇ ದಿನೇ ಈ ಮಾಲೆಯ ಬಗೆಗೆ ಜನರ ವಿಶ್ವಾಸಾದರಗಳು ಅಧಿಕವಾಗುತ್ತಿವೆ. "ಈ ತಿಂಗಳು ಏನಾದರೂ ಹೊಸ ಪುಸ್ತಿಕೆ ಬಂದಿದೆಯೆ? ಮುಗಿದು ಹೋಗಿರುವ ಪುಸ್ತಿಕೆಗಳು ಅಚ್ಚಾಗಿವೆಯೆ?" ಎಂದು ಮೇಲಿಂದ ಮೇಲೆ ಜನ ಕೇಳುತ್ತಿರುತ್ತಾರೆ. ಇದು ನಿಜವಾಗಿಯೂ ಸಂತೋಷದ ಸಂಗತಿ; ನಾಡಿನ ಪ್ರಗತಿಯ ಒಂದು ಚಿಹ್ನೆ.

ನಾಡಿನಲ್ಲಿ ದಿನೇ ದಿನೇ ವಿದ್ಯಾವಂತರ ಮತ್ತು ಅಕ್ಷರಸ್ಥರ ಸಂಖ್ಯೆ ಬೆಳೆಯುತ್ತಿದೆ. ಕೇವಲ ಸಾಕ್ಷರತೆಯಿಂದ ಮಹತ್ತಾದ ಪ್ರಯೋಜನವೇನೂ ಲಭಿಸದು. ಸಾಕ್ಷರತೆ ಬೇರೊಂದು ಸಿದ್ಧಿಗಾಗಿ ಸಾಧನವೇ ಹೊರತು ಅದೇ ಪರಮ ಗುರಿಯಲ್ಲ; ಜ್ಞಾನ ಸಂಪಾದನೆಯೇ ಅದರ ಪರಮ ಗುರಿ. ಈ ಗುರಿಯ ಸಾಧನೆಗಾಗಿ ಸಕಲ ಅನುಕೂಲತೆಗಳನ್ನು ಕಲ್ಪಿಸುವುದು ವಿಶ್ವವಿದ್ಯಾನಿಲಯದಂಥ ಸಂಸ್ಥೆಗಳ ಆದ್ಯಕರ್ತವ್ಯ. ಈ ಮೂಲಕ ವಿಶ್ವ

ವಿದ್ಯಾನಿಲಯದ ಜ್ಞಾನವಾಹಿನಿ ನಾಡಿನ ಮೂಲೆಮೂಲೆಗೆಲ್ಲ ಹರಿದು, ಸಮಷ್ಟಿಪ್ರಜ್ಞೆ ವಿಕಾಸಗೊಳ್ಳಲನುಕೂಲವಾಗುತ್ತದೆ.

ಈ ಮಾಲೆಯಿಂದ ಸಾಮಾನ್ಯ ಜನರಲ್ಲಿ ಜ್ಞಾನಪ್ರಸಾರ ಕಾರ್ಯ ತಕ್ಕಮಟ್ಟಿಗೆ ಯಶಸ್ವಿಯಾಗಿ ನಡೆದಿರುವಂತೆಯೆ ಕನ್ನಡ ದಲ್ಲಿ ವಿಜ್ಞಾನ ಸಂಬಂಧವಾದ ವಿಷಯಗಳನ್ನು ಸುಲಭವಾಗಿ ಸರಳವಾಗಿ ಹೇಳಬಹುದು, ಮತ್ತು ಕನ್ನಡ ವೈಜ್ಞಾನಿಕ ಭಾಷೆ ಯಾಗಬಲ್ಲುದು ಎಂಬ ಅಂಶ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಈ ಪುಸ್ತಿಕೆಗಳ ಪಟ್ಟಿಯನ್ನೊಮ್ಮೆ ಓದಿದರೆ ಸಂದೇಹವಾದಿಗಳ ಶಂಕೆ ಸಂಪೂರ್ಣವಾಗಿ ನಿವಾರಣೆಗೊಂಡು ಧೈರ್ಯ ಮೂಡದಿರದು. ಇವುಗಳಲ್ಲಿ ೬೬ ಪುಸ್ತಿಕೆಗಳು ಭೌತವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ, ಸಮಾಜ ವಿಜ್ಞಾನ, ವೈದ್ಯ ವಿಜ್ಞಾನ, ಗಣಿತ ವಿಜ್ಞಾನ, ಇತಿಹಾಸ ಮೊದಲಾದುವುಗಳಿಗೆ ಸಂಬಂಧಿಸಿದವು. ಉಳಿದ ೨೯ ಪುಸ್ತಿಕೆಗಳು ಸಾಹಿತ್ಯ ಮತ್ತು ಸಾಹಿತ್ಯ ವಿಮರ್ಶೆಗೆ ಸಂಬಂಧಿಸಿದುವು. ಇವುಗಳ ಗ್ರಂಥಕರ್ತರು ಪ್ರಮುಖವಾಗಿ ವಿಶ್ವವಿದ್ಯಾನಿಲಯದಲ್ಲಿ ಹತ್ತಿಪ್ಪತ್ತು ವರ್ಷಗಳ ಕಾಲ ಪಾಠ ಹೇಳಿ ನುರಿತಿರುವ ಘನ ವಿದ್ವಾಂಸರು. ಬಹಳ ಹಿಂದೆಯೇ ವೈಜ್ಞಾನಿಕ ಗ್ರಂಥಗಳ ರಚನೆಗೆ ಕೈಹಾಕಿ ಕನ್ನಡ ವೈಜ್ಞಾನಿಕ ಭಾಷೆಯಾಗುವ ಸಾಮರ್ಥ್ಯವನ್ನು ಪಡೆದಿದೆ, ವಿಶ್ವವಿದ್ಯಾನಿಲಯದಲ್ಲಿ ಶಿಕ್ಷಣಮಾಧ್ಯಮವಾಗುವ ಶಕ್ತಿ ಯನ್ನು ಪಡೆದಿದೆ ಎಂದು ತೋರಿಸಿಕೊಟ್ಟಿದ್ದಾರೆ. ಅವರೆಲ್ಲ ಅಭಿನಂದನಾರ್ಹರು.

ಈ ಮಾಲೆಯ ಕಾರ್ಯ ತ್ವರಿತಗೊಂಡು, ವಿಸ್ತಾರಗೊಂಡು ಪುಸ್ತಕಗಳ ಸಂಖ್ಯೆ ದಿನೇ ದಿನೇ ಬೆಳೆಯಬೇಕೆಂದೂ, ಇದರಿಂದ ಸಾಮಾನ್ಯ ಜನತೆ ಸಂಪೂರ್ಣ ಪ್ರಯೋಜನ ಪಡೆದು ಸಮಷ್ಟಿ

ಪ್ರಜ್ಞೆ ಸರ್ವತೋಮುಖವಾಗಿ ವಿಕಾಸಗೊಳ್ಳಬೇಕೆಂಬುದೂ ವಿಶ್ವವಿದ್ಯಾನಿಲಯದ ಆಸೆ. ಕನ್ನಡನಾಡು ಒಂದುಗೂಡಿರುವ ಈ ಶಕಮುಹೂರ್ತದಲ್ಲಿ ಕನ್ನಡನುಡಿ ಆಡಳಿತದ ಭಾಷೆಯಾಗಿ ವ್ಯವಹಾರದ ಭಾಷೆಯಾಗಿ, ಶಿಕ್ಷಣದ ಭಾಷೆಯಾಗಿ, ಜನತೆಯ ಸಂಸ್ಕೃತಿವಿಕಾಸಸಾಧನದ ಭಾಷೆಯಾಗಿ ಮುಂದುವರಿಯುವುದರಲ್ಲಿ ಸಂದೇಹವಿಲ್ಲ. ವಿಶ್ವವಿದ್ಯಾನಿಲಯದ ಈ ಸೇವೆಯನ್ನು ಕರ್ನಾಟಕ ಸಂಪೂರ್ಣವಾಗಿ ತನ್ನ ಮೇಲ್ಮೆಗೂ ಏಳ್ಗೆಗೂ ಬಳಸಿಕೊಳ್ಳುತ್ತದೆಂದು ನಾವು ಹಾರೈಸುತ್ತೇವೆ.

ಮೈಸೂರು
೨೧—೧೨—೧೯೫೯

ಕೆ. ವಿ. ಪುಟ್ಟಪ್ಪ
ವೈಸ್-ಛಾನ್ಸಲರ್.

ಪ್ರೇರಣೆ

"ಕಲ್ಪನೆಗಿಂತಲೂ ವಾಸ್ತವಾಂಶಗಳು ಹೆಚ್ಚು ಆಶ್ಚರ್ಯಕರವಾದುವು" ಎಂಬ ನಾಣ್ಣುಡಿಯೊಂದಿದೆ. ಈ ಮಾತು ನಮ್ಮ ಅನೇಕ ಮಾನಸಿಕ ವ್ಯಾಪಾರಗಳಿಗೆ ಬಹು ಚೆನ್ನಾಗಿ ಅನ್ವಯಿಸುತ್ತದೆ. ಕಲ್ಪನೆಯ ಘಟನೆಗಳು ವಾಸ್ತವವಲ್ಲವೆಂದು ನಮಗೆ ತಿಳಿದಿದ್ದರೂ ಕೂಡ ತಾತ್ಕಾಲಿಕವಾಗಿ ಅವನ್ನು ನಂಬಿ ಆಶ್ಚರ್ಯಪಡುತ್ತೇವೆ. ಇಂತಹ ಕಾಲ್ಪನಿಕ ವಿಷಯಗಳನ್ನು ಹೋಲುವ ಯತಾರ್ಥ ಘಟನೆಗಳನ್ನು ಕಂಡಾಗ ಮತ್ತಷ್ಟು ಆಶ್ಚರ್ಯವಾಗುವುದರಲ್ಲಿ ಸಂದೇಹವಿಲ್ಲ. ಅಲ್ಲಾವುದ್ದೀನನ ಬಳಿಯಿದ್ದ ಅದ್ಭುತ ದೀಪವನ್ನು ಉಜ್ಜಿದಾಗ ಅದರಿಂದ ಭೂತ ಒಂದು ಕಾಣಿಸಿಕೊಂಡು, ಅವನು ಹೇಳಿದ ಎಲ್ಲ ಕೆಲಸಗಳನ್ನು ಮಾಡುತ್ತಿದ್ದಿತ್ತೆಂಬುದನ್ನು ನಾವು ಓದಿ ಆಶ್ಚರ್ಯಪಡುತ್ತೇವೆ. ಆದರೆ ಇದು ಕೇವಲ ಕಲ್ಪಿತ, ಅಯಥಾರ್ಥವೆಂಬುದು ನಮಗೆ ಚೆನ್ನಾಗಿ ಗೊತ್ತು. ನಮ್ಮ ಮನಸ್ಸೆಂಬ ಒಂದು ಅದ್ಭುತ ದೀಪವನ್ನು ಒಂದು ಬಗೆಯಲ್ಲಿ ಉಜ್ಜಿದಾಗ ಅದರಿಂದಲೂ ಒಂದು ರೀತಿಯ ಭೂತವು ಹೊರಗೆ ಕಾಣಿಸಿಕೊಂಡು, ಬಹಳ ಅದ್ಭುತ ಕಾರ್ಯಗಳನ್ನು ಮಾಡುವುದೆಂಬುದನ್ನು ನಂಬುವುದು ಕಷ್ಟವಾದರೂ, ಅದು ವಾಸ್ತವಾಂಶ. ಕವಿಕುಲಗುರುವಾದ ಕಾಳಿದಾಸನ 'ಅಭಿಜ್ಞಾನ ಶಾಕುಂತಲ' ದಲ್ಲಿ ದುಷ್ಯಂತನು ಶಕುಂತಲೆಯನ್ನು ಗಾಂಧರ್ವ ರೀತಿಯಲ್ಲಿ ವಿವಾಹವಾದ ವಿಷಯವನ್ನು ಸಂಪೂರ್ಣವಾಗಿ ಮರೆತುಬಿಡುತ್ತಾನೆ. ಅಂತಃಪುರದಲ್ಲಿ ಹಿರಿಯರಾಣಿ, ಹಂಸಪದಿಕೆ ನುಡಿಸುತ್ತಿರುವ ಮಧುರವಾದ ವೀಣಾವಾದನವನ್ನು

ಕೇಳಿ ಯಾವುದೋ ಒಂದು ಬಹುಹಿಂದಿನ ಸ್ನೇಹದ ಅಸ್ಪಷ್ಟ ವಾದ ನೆನಪಾದಂತೆ ಮನಸ್ಸಿನಲ್ಲಿ ಕಳವಳಗೊಳ್ಳುತ್ತಾನೆ. ಕೊನೆಗೆ ಅಭಿಜ್ಞಾನಾಂಗುಳೀಯಕವನ್ನು ನೋಡಿದಾಗ ಹಠಾತ್ತನೆ ಮರೆತಿದ್ದ ವಿಷಯಗಳೆಲ್ಲವೂ ಸ್ಮೃತಿ ಪಥಕ್ಕೆ ಬರುತ್ತವೆ. ಈ ಘಟನೆಗಳೂ ಕೇವಲ ಕಾಲ್ಪನಿಕವೇ. ಇವುಗಳನ್ನು ಚಿತ್ರಿಸುವುದರಲ್ಲಿ ಕಾಳಿದಾಸನ ಕಲ್ಪನಾಶಕ್ತಿ, ಪ್ರತಿಭೆಗಳನ್ನು ನಾವು ಮೆಚ್ಚಿಕೊಳ್ಳುವೆವಾದರೂ, ಅದನ್ನು ಯಥಾರ್ಥವೆಂದು ನಂಬುವುದಿಲ್ಲ. ಆದರೆ ನಮ್ಮಲ್ಲಿ ಅನೇಕರಿಗೆ ಮನಸ್ಸಿನಲ್ಲಿ ಕೆಲವು ವೇಳೆ ಇಂತಹ ಅಗೋಚರವಾದ ದೂರ್ವಾಸಶಾಪ ತಗುಲಿ ಸ್ಮೃತಿನಾಶ ಉಂಟಾಗುತ್ತದೆ; ಅಕಾರಣವಾಗಿ ಮನಸ್ಸು ವ್ಯಾಕುಲಗೊಳ್ಳುತ್ತದೆ. ಹಾಗೆಯೆ ಉಂಗುರಕ್ಕೆ ಬದಲು ಯಾವುದೋ ಒಂದು ಪದಾರ್ಥವನ್ನು ಕಂಡಕೂಡಲೆ ಹಿಂದಿನ ಸ್ಮರಣೆ ಮರಳಿ ಬರುತ್ತದೆ. ಈ ಅಂಶಗಳು ವಾಸ್ತವವೆಂದು ತಿಳಿದರೆ ಅತ್ಯಂತ ಆಶ್ಚರ್ಯಕರವೆನಿಸುತ್ತದೆ.

ಇಂತಹ ವಿಚಿತ್ರವೆನಿಸುವ ಮಾನಸಿಕ ವ್ಯಾಪಾರಗಳು ಹೇಗೆ ಮತ್ತು ಏಕೆ ನಡೆಯುವುವು ಎಂಬಿವೇ ಮೊದಲಾದ ಪ್ರಶ್ನೆಗಳನ್ನು ವಿವೇಚಿಸುವ ಮೊದಲು ನಮ್ಮ ಮನಸ್ಸಿನ ಸ್ವರೂಪವನ್ನು ಸ್ಥೂಲವಾಗಿಯಾದರೂ ಪರಿಚಯ ಮಾಡಿಕೊಳ್ಳುವುದು ಆವಶ್ಯಕ. ಮನೋವಿಜ್ಞಾನಿಗಳ ಅಭಿಪ್ರಾಯಕ್ಕೆ ಅನುಸಾರ, ಮನಸ್ಸು ಸಾಧಾರಣವಾಗಿ ಎರಡು ಹಂತಗಳಲ್ಲಿ ತನ್ನ ವ್ಯಾಪಾರಗಳನ್ನು ಸದಾ ನಡೆಸುತ್ತಿರುತ್ತದೆ. ಈ ಹಂತಗಳನ್ನು ಹೊರಮನಸ್ಸು ಮತ್ತು ಒಳಮನಸ್ಸುಗಳೆಂದು ಕರೆಯಬಹುದು. ಸಮುದ್ರದ ಮೇಲೆ ತೇಲುತ್ತಿರುವ ಬೃಹದಾಕಾರದ ಮಂಜಿನ ಗಡ್ಡೆಯ ಬಹುಭಾಗವು ನೀರಿನ ಕೆಳಗಿದ್ದು ಸ್ವಲ್ಪಭಾಗ

ಮಾತ್ರ ಮೇಲೆ ಕಾಣುವಂತೆ, ನಮ್ಮ ಮನಸ್ಸಿನ ಬಹುಭಾಗವು ಗುಪ್ತವಾಗಿದ್ದು, ಸ್ವಲ್ಪಭಾಗ ಮಾತ್ರ ಪ್ರಕಟವಾಗಿರುತ್ತದೆ. ಹೀಗೆ ಪ್ರಕಟವಾಗಿರುವ ಭಾಗವೇ ಹೊರಮನಸ್ಸು. ಗುಪ್ತವಾಗಿರುವ ಭಾಗವೇ ಒಳಮನಸ್ಸು. ಪ್ರತಿಕ್ಷಣವೂ ಕಣ್ಣು, ಕಿವಿ, ಮೂಗು ಮೊದಲಾದ ಇಂದ್ರಿಯಗಳ ಮುಖಾಂತರವೂ, ಚಿಂತನೆ, ಸ್ಮರಣೆ ಮೊದಲಾದುವುಗಳಿಂದಲೂ, ಅನುಭವಕ್ಕೆ ಗೋಚರವಾಗುವ ಎಲ್ಲ ಮಾನಸಿಕ ವ್ಯಾಪಾರಗಳು ಹೊರಮನಸ್ಸಿಗೆ ಸೇರಿದವು. ಇವುಗಳಲ್ಲದೆ, ಹುಟ್ಟಿದ ಗಳಿಗೆಯಿಂದ ಈ ಕ್ಷಣದವರೆವಿಗೂ ಆದ ಎಲ್ಲ ಅನುಭವಗಳ, ಪ್ರತಿಕ್ರಿಯೆಗಳ, ಪ್ರವೃತ್ತಿಗಳ, ಒಂದು ದೊಡ್ಡ ಸಮುದಾಯವೇ ಮನಸ್ಸಿನ ಅಂತರಾಳದಲ್ಲಿ ಅಚ್ಚಳಿಯದೇ ನಿಂತಿರುತ್ತವೆ. ಇವೆಲ್ಲವೂ ಒಳಮನಸ್ಸಿಗೆ ಸೇರಿದವು. ಮೋಡಗಳಿಂದ ಬಿದ್ದ ಮಳೆಯ ನೀರು ನೆಲದಲ್ಲಿ ಹಿಂಗಿ ಭೂಮಿಯ ಒಳಪದರದಲ್ಲಿ ಗುಪ್ತಗಾಮಿನಿಯಾಗಿ ಹರಿಯುವಂತೆ, ಅನುಭವಕ್ಕೆ ಗೋಚರವಾಗಿ, ಹೊರಮನಸ್ಸಿನ ಪದರವನ್ನು ಹಾಯ್ದು, ಒಳಗಡೆ ಮನಸ್ಸಿನ ಅಂತರಾಳದಲ್ಲಿ ಸಂತತವೂ ಪ್ರತಿಕ್ರಿಯೆಗಳನ್ನು ನಡೆಸುತ್ತಿರುವ ಅನುಭವಗಳ ಪ್ರವಾಹವೇ ಒಳಮನಸ್ಸು. ಇವುಗಳೆಲ್ಲವೂ ಗುಪ್ತವಾಗಿರುತ್ತವೆ. ಕೆಲವು ಸುಪ್ತವಾಗಿಯೂ ಇರುತ್ತವೆ. ಕೆಲವು ಆಸೆಗಳು, ಪ್ರವೃತ್ತಿಗಳು ತಮ್ಮ ಗುರಿಯನ್ನು ಮುಟ್ಟಲು ಸಂತತವಾದ ಪ್ರಯತ್ನಗಳನ್ನು ನಡೆಸುತ್ತಿರುತ್ತವೆ. ಆದರೆ ಹೊರಮನಸ್ಸು ಕೆಲವು ಸಾಮಾಜಿಕ, ನೈತಿಕ ನಿಯಮಗಳಿಗೆ ಕಟ್ಟು ಬಿದ್ದು ಅಂತಹ ಪ್ರವೃತ್ತಿಗಳನ್ನು ಅದುಮಿ ಹಿಡಿದಿರುತ್ತದೆ. ಬಲವಾಗಿ ಒತ್ತಿ ಹಿಡಿದ ಸ್ಪ್ರಿಂಗಿನಂತೆ ಇಂತಹ ಪ್ರವೃತ್ತಿಗಳು ಕೆಲವು ವೇಳೆ ಹಠಾತ್ತನೆ ಮೇಲೆದ್ದು ಬರುವುದುಂಟು.

ಕನಸುಗಳು ಇಂತಹ ಪ್ರವೃತ್ತಿಗಳ ಒಂದು ಬಗೆಯ ಆವಿರ್ಭಾವ. ಕೆಲವುವೇಳೆ ಈ ಪ್ರವೃತ್ತಿಗಳು ಹೊರಮನಸ್ಸಿನ ಕಟ್ಟುಪಾಡುಗಳನ್ನು ಉಲ್ಲಂಘಿಸಲಾಗದೆ ರೂಪಾಂತರಗೊಂಡು, ವೇಷವನ್ನು ಮರೆಸಿಕೊಂಡು ಹೊರಬರುವುದೂ ಉಂಟು. ಕೆಲವು ಅತ್ಯಂತ ಪ್ರಭಾವಯುತವಾದ ಪ್ರವೃತ್ತಿಗಳು ಹೀಗೆ ವೇಗದಿಂದ ಹೊರಬರುವಾಗ ಮಾನಸಿಕ ಕ್ಷೋಭೆಯನ್ನೇ ಉಂಟುಮಾಡುವುವು. ಕೆಲವುವೇಳೆ ಹೊರಮನಸ್ಸು ಬಹಳ ತಿಳಿಯಾಗಿ ಶಾಂತವಾಗಿ ಕಂಡರೂ "ಕ್ರೂರ ನಕ್ರಾಕುಲದೊಳಗಡಗಿರ್ದ ಪೆರ್ಮಡು ಗಭೀರ ನಿರ್ಮಲ ಜಲದೊಳೆಸೆವಂತೆ" ಒಳಮನಸ್ಸಿನಲ್ಲಿ ಅನೇಕ ಬಗೆಯಾದ ಘರ್ಷಣೆ, ಆಂದೋಲನ ಮತ್ತು ಕ್ಷೋಭೆಗಳು ಇದ್ದೇ ಇರುತ್ತವೆ. ಇಂತಹ ಘರ್ಷಣೆ ಕ್ಷೋಭೆಗಳಿಗೊಳಗಾದ ಪ್ರವೃತ್ತಿಗಳು ಹೊರಬೀಳುವಾಗ, ಭೂಗರ್ಭದಲ್ಲಿ ನಡೆಯುವ ಅನೇಕ ಬಗೆಯಾದ ಕ್ಷೋಭೆಗಳ ಪರಿಣಾಮವಾಗಿ ಕಾದ ಲೋಹದ ಪ್ರವಾಹವು ಜ್ವಾಲಾಮುಖಿಯ ಬಾಯೊಳಗಿನಿಂದ ಹೊರ ಹರಿಯುವಂತೆ ಹೊರಬಂದು ಒಬ್ಬ ವ್ಯಕ್ತಿಯ ಸಂಪೂರ್ಣ ಮಾನಸಿಕ ಜೀವನವನ್ನೇ ತಲ್ಲಣಗೊಳಿಸುವುದುಂಟು.

ಈ ಒಳಮನಸ್ಸು ಸದಾಕಾಲದಲ್ಲಿಯೂ ಕೆಲಸ ಮಾಡುತ್ತಿರುತ್ತದೆ. ನಿದ್ರೆಯ ಸಮಯದಲ್ಲಿ ಹೊರ ಮನಸ್ಸಿಗೆ ಒಂದು ವಿಧವಾದ ವಿಶ್ರಾಂತಿ ದೊರಕಬಹುದೆಂದು ಹೇಳಬಹುದಾದರೂ, ಒಳಮನಸ್ಸು ಈ ಸಮಯದಲ್ಲೂ ಕೂಡ ಜಾಗ್ರತವಾಗಿಯೇ ಇದ್ದು ಬಹಳ ಚಟುವಟಿಕೆಯಿಂದ ಕೆಲಸಮಾಡುತ್ತಿರುತ್ತದೆ. ಇದಕ್ಕೆ ನಿದರ್ಶನವಾಗಿ ನಮ್ಮ ನಿತ್ಯ ಜೀವನದ ಸರ್ವಸಾಮಾನ್ಯವಾದ ಅನುಭವಗಳನ್ನು ಉದಾಹರಿಸಬಹುದು.

ಒಬ್ಬ ವ್ಯಕ್ತಿಯು ನಿದ್ರಿಸುವುದಕ್ಕೆ ಮೊದಲು ಮಾರನೆಯ ಪ್ರಾತಃಕಾಲ ನಾಲ್ಕುಗಂಟೆಗೆ ಏಳಬೇಕೆಂಬ ದೃಢಸಂಕಲ್ಪ ದಿಂದ ಮಲಗಿದರೆ ಅವನು ಅದೇ ಸಮಯಕ್ಕೆ ಏಳುತ್ತಾನೆ. ಹೀಗಾಗಲು ಕಾರಣ ಅವನ ಒಳಮನಸ್ಸು ಜಾಗೃತವಾಗಿದ್ದು ಆ ವೇಳೆಗೆ ಸರಿಯಾಗಿ ಅವನನ್ನು ಎಚ್ಚರಿಸುತ್ತದೆ. ಗಣಿತಶಾಸ್ತ್ರದ ಒಬ್ಬ ವಿದ್ಯಾರ್ಥಿ ಒಂದು ಕಠಿಣವಾದ ಲೆಕ್ಕವನ್ನು ಮಾಡಲು ಪ್ರಯತ್ನಪಟ್ಟು ವಿಫಲನಾಗಿ ಹಾಗೆಯೇ ನಿದ್ರಿಸುತ್ತಾನೆ. ಆಮೇಲೆ ಬೆಳಗಿನಜಾವದಲ್ಲಿ ಎದ್ದು ದೀಪ ಹಚ್ಚಿ ಆ ಲೆಕ್ಕವನ್ನು ಮಾಡಿ ಪೂರೈಸಿ ಮತ್ತೆ ಮಲಗುತ್ತಾನೆ. ಮಾರನೆಯ ದಿನ ಎದ್ದು ಪುಸ್ತಕವನ್ನು ತೆಗೆದುನೋಡಿದಾಗ ಅವನಿಗೇ ಆಶ್ಚರ್ಯವಾಗುತ್ತದೆ. ತಾನು ಲೆಕ್ಕವನ್ನು ಮಾಡುವ ಯತ್ನದಲ್ಲಿ ಕೃತಕೃತ್ಯನಾಗದೆ ಮಲಗಿದ ವಿಚಾರ ಮಾತ್ರ ನೆನಪಿರುತ್ತದೆಯೇ ಹೊರತು, ತಾನು ನಡುರಾತ್ರಿಯಲ್ಲಿ ಎದ್ದು ಲೆಕ್ಕವನ್ನು ಮಾಡಿ ಮುಗಿಸಿದ ವಿಚಾರ ನೆನಪಿರುವುದಿಲ್ಲ. ಹೀಗೆ ಮಧ್ಯರಾತ್ರಿಯಲ್ಲಿ ಎದ್ದು ಲೆಕ್ಕವನ್ನು ಮಾಡಿ ಮುಗಿಸು ವಂತೆ ಪ್ರೇರೇಪಿಸಿದುದು ಅವನ ಒಳಮನಸ್ಸು. ಇಂತಹ ಅನು ಭವಗಳು ಸಾಮಾನ್ಯವಾಗಿ ಎಲ್ಲರೂ ಕಂಡು ಕೇಳಿರುವ ವಿಷಯಗಳು. ಇವಲ್ಲದೆ ಕೆಲವು ಅಸಾಧಾರಣವಾದ ಘಟನೆ ಗಳೂ ಉಂಟು. ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಸಿದ್ಧನಾದ ಕಾಲ್ರಿಡ್ಜ್ ಎಂಬ ಕವಿಯ ಜೀವನದಲ್ಲಿ ನಡೆದ ಒಂದು ಘಟನೆ ಬಹಳ ವಿಸ್ಮಯಕರವಾದುದು. ಒಂದು ದಿನ ಮಧ್ಯಾಹ್ನ ಆತನು ಊಟವಾದ ನಂತರ ತನ್ನ ಆರಾಮುಕುರ್ಚಿಯಲ್ಲಿ ಕುಳಿತು ಕೆಲವು ವೈಭವಯುತವಾದ ದೃಶ್ಯಗಳ ವರ್ಣನೆ ಯನ್ನು ಓದುತ್ತಿದ್ದಂತೆಯೇ ನಿದ್ದೆ ಹೋದನು. ಆಗ ಅವನು

ಕಂಡ ಸುಂದರ ಸ್ವಪ್ನದಲ್ಲಿ ಆ ವೈಭವದ ದೃಶ್ಯಗಳೇ ಮತ್ತೆ ಅವನ ಕಣ್ಣೆದುರಿಗೆ ಗೋಚರವಾಗುವುದು. ಹೀಗಾಗುವು ದೇನೂ ಅಸಾಧಾರಣವಲ್ಲ. ಆದರೆ ಅದೇ ಸಮಯದಲ್ಲಿಯೇ ಆ ದೃಶ್ಯಗಳನ್ನೊಳಗೊಂಡ ಒಂದು ಕವಿತೆಯ ಸುಮಾರು ಮುನ್ನೂರು, ನಾನೂರು ಸಾಲುಗಳು ಅವನ ಮನಸ್ಸಿನ ಪದರದ ಮೇಲೆ ಹಾದುಹೋದವು. ಎಚ್ಚರವಾದ ಕೂಡಲೇ ಅವುಗಳನ್ನು ಅವನು ಬರೆದಿಟ್ಟನು. ಅದು ಈಗ ಅಪೂರ್ಣವಾದ, ಆದರೂ ಬಹು ಸುಂದರವಾದ ಕವಿತೆಯೆಂದು ಪ್ರಖ್ಯಾತವಾಗಿದೆ. ಹೀಗೆ ಕವಿತೆಯನ್ನು ರಚಿಸಿದುದು ಅವನ ಒಳಮನಸ್ಸು. ಅವನ ಅರಿವಿಲ್ಲದಂತೆಯೇ ಅವನ ಒಳಮನಸ್ಸು ಈ ಕವಿತೆ ಯನ್ನು ರಚಿಸಿತು. ಇದರಿಂದ ಒಳಮನಸ್ಸನ್ನು ನೇಪಥ್ಯ ವೆಂದೂ ಹೊರಮನಸ್ಸನ್ನು ರಂಗಸ್ಥಳವೆಂದೂ ಹೇಳಬಹುದು. ಅಥವಾ ಹೊರಮನಸ್ಸನ್ನು ಸಿನಿಮಾ ಪರದೆಗೂ ಒಳಮನ ಸ್ಸನ್ನು ಪ್ರೊಜೆಕ್ಷನ್ ರೂಮಿಗೂ ಹೋಲಿಸಬಹುದು.

ಈ ಒಳಮನಸ್ಸಿನ ಅಂತರಾಳದಲ್ಲಿ ನಾನಾಬಗೆಯಾದ ಅನುಭವಗಳೂ, ಆಸೆಆಕಾಂಕ್ಷೆಗಳೂ, ಕ್ರಿಯೆ ಪ್ರತಿಕ್ರಿಯೆಗಳೂ, ಪ್ರವೃತ್ತಿಗಳೂ ಅಡಗಿರುವವೆಂದು ಮೇಲೆ ಹೇಳಿದೆಯಷ್ಟೆ. ಮನಸ್ಸೆಂಬ ಈ ಆಳವಾದ ಭಾವಿಯ ತಳದಲ್ಲಿ ಸೇರಿರುವ ಈ ನಾನಾಬಗೆಯ ಮಾನಸಿಕ ವ್ಯಾಪಾರಗಳನ್ನು ಹೊರ ತೆಗೆಯಲು ಸಮರ್ಥವಾದ ಒಂದು ಪಾತಾಳಸೂಜಿಬೇಕು. ಈ ಪಾತಾಳಸೂಜಿಯನ್ನು ಮನಸ್ಸಿನೊಳಕ್ಕೆ ಇಳಿಯ ಬಿಟ್ಟು ಚೆನ್ನಾಗಿ ಕಲಕಿ ಮೇಲಕ್ಕೆಳೆದರೆ ಅಲ್ಲಿ ಹುದುಗಿರುವ ಕೆಲವು ಪದಾರ್ಥಗಳನ್ನಾದರೂ ಮೇಲಕ್ಕೆತ್ತಬಹುದು. ಇಂತಹ ಪಾತಾಳಸೂಜಿಯೇ ಮನೋವಿಜ್ಞಾನಿಗಳು ಕಂಡುಹಿಡಿ

ದಿರುವ ಕೃತಕನಿದ್ರೆ. ಮನಸ್ಸೆಂಬ ಅದ್ಭುತ ದೀಪವನ್ನು ಉಜ್ಜಿ ಅದರೊಳಗಿನ ಒಳಮನಸ್ಸೆಂಬ ಭೂತವನ್ನು ಹೊರ ತೆಗೆಯಲು ಈ ಕೃತಕನಿದ್ರೆಯೇ ಸಾಧನ. ಒಳಮನಸ್ಸಿನ ವ್ಯಾಪಾರಗಳಲ್ಲಿ ಕೆಲವನ್ನು ಐಚ್ಛಿಕವ್ಯಾಪಾರಗಳೆಂದು ಮತ್ತೆ ಕೆಲವನ್ನು ಅನೈಚ್ಛಿಕ ವ್ಯಾಪಾರಗಳೆಂದು ಮನೋವಿಜ್ಞಾನಿಗಳು ವಿಂಗಡಿಸಿರುತ್ತಾರೆ. ಒಳಮನಸ್ಸಿನಲ್ಲಿರುವ ವ್ಯಾಪಾರಗಳಲ್ಲಿ ಕೆಲವನ್ನು ಸ್ಮರಣೆಯ ಮೂಲಕ ಹೊರಮನಸ್ಸಿನ ಹಂತಕ್ಕೆ ಎತ್ತಬಹುದು. ಇಂತಹವುಗಳೇ ಐಚ್ಛಿಕ ಮನೋವ್ಯಾಪಾರ ಗಳು. ಆದರೆ ಮತ್ತೆ ಕೆಲವನ್ನು ಸ್ಮರಣೆಯಿಂದ ಹೊರಕ್ಕೆಳೆ ಯಲು ಸಾಧ್ಯವಿಲ್ಲ. ಹತ್ತು ವರ್ಷಗಳ ಕೆಳಗೆ ದೀಪಾವಳಿ ಹಬ್ಬದ ದಿನ ಯಾವ ಅಡಿಗೆ ಮಾಡಿದ್ದರೆಂದು ಸಾಧಾರಣವಾಗಿ ಸ್ಮರಣೆಗೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಆದರೆ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಲ್ಲಿಯೂ ಅವನು ಹುಟ್ಟಿದ ಕ್ಷಣದಿಂದ ಮೊದಲುಗೊಂಡು ಆದ ಎಲ್ಲಾ ಅನುಭವಗಳು ಮನಸ್ಸಿನ ಫಲಕದ ಮೇಲೆ ಅಚ್ಚಳಿಯದೆ ಟೇಪ್‌ರಿಕಾರ್ಡರಿನಲ್ಲಿ ಬಿದ್ದಿರು ವಂತೆ ಬಿಂಬಿತವಾಗಿರುತ್ತವೆ. ಅವನ್ನು ಹೊರಮನಸ್ಸಿನ ಪದರಕ್ಕೆ ಎಳೆಯಲು ಒಂದು ಸಾಧನೆ ಬೇಕು. ಈ ಸಾಧನೆಯೇ ಕೃತಕನಿದ್ರೆ.

ಇದಕ್ಕೆ ಈ ಹೆಸರು ಬರಲು ಕಾರಣ, ಇದಕ್ಕೂ ಸಾಮಾನ್ಯ ನಿದ್ರೆಗೂ ಇರುವ ಬಹುಮಟ್ಟಿನ ಹೋಲಿಕೆ. ಇದರ ಸ್ವಭಾವದ ವಿಚಾರದಲ್ಲಿ ಮನೋವಿಜ್ಞಾನಿಗಳಲ್ಲಿ ಬಹಳ ತೀವ್ರವಾದ ಭಿನ್ನಾ ಭಿಪ್ರಾಯಗಳಿವೆ. ಇದೊಂದು ಬಗೆಯ ಮನೋವೈಪರೀತ್ಯ ವೆಂದು ಕೆಲವರ ವಾದವಾದರೆ, ಮತ್ತೆ ಕೆಲವರು ಇದು ಬಹಳ ಸಹಜವಾದ ಮತ್ತು ಸ್ವಭಾವಿಕವಾದ ಮನಸ್ಸಿನ ಸ್ಥಿತಿ ಎನ್ನು

ತ್ತಾರೆ. ೧೮ ನೆಯ ಶತಮಾನದ ಉತ್ತರಾರ್ಧದಲ್ಲಿ 'ವಿಯನ್ನಾ' ನಗರದಲ್ಲಿ ವಾಸಿಸುತ್ತಿದ್ದ ಮೆಸ್‌ಮರ್ ಎಂಬ ವಿದ್ವಾಂಸನು ಈ ಬಗೆಯ ಚರ್ಚೆಯನ್ನು ಮೊದಲು ಪ್ರಾರಂಭಿಸಿದನು. ಈ ಕೃತಕನಿದ್ರೆಗೆ ಆತನ ಹೆಸರನ್ನು ಸೇರಿಸಿ ಮೆಸ್‌ಮರಿಸ್‌ಮ್ ಎಂಬ ಹೆಸರೂ ಉಂಟು. ಸಾಮಾನ್ಯವಾಗಿ ಬಳಕೆಯಲ್ಲಿರುವ ಇದಕ್ಕೆ ಪರ್ಯಾಯಪದ 'ಹಿಪ್ನಾಟಿಸಮ್'. ಈತನ ಅಭಿಪ್ರಾಯಕ್ಕನುಸಾರ ಕೃತಕನಿದ್ರೆಯಲ್ಲಿ ಒಬ್ಬ ಪ್ರಭಾವಶಾಲಿಯಾದ ವ್ಯಕ್ತಿಯಿಂದ ಆತನ ಪ್ರಭಾವಕ್ಕೊಳಪಟ್ಟ ಮತ್ತೊಬ್ಬ-ವ್ಯಕ್ತಿಗೆ ಒಂದು ಬಗೆಯಾದ ಅಗೋಚರವಾದ ದ್ರವವು ಹರಿಯುವುದರಿಂದ, ಆ ವ್ಯಕ್ತಿಯ ಮನಸ್ಸು ಪೂರ್ಣವಾಗಿ ವಶವಾಗುತ್ತದೆ. ಇಂತಹ ದ್ರವಕ್ಕೆ ಅಥವಾ ಪ್ರಭಾವಕ್ಕೆ "ಅನಿಮಲ್ ಮ್ಯಾಗ್ನಟಿಸಮ್" (ವ್ಯಕ್ತಿಯ ಆಕರ್ಷಣೆ) ಎಂದು ಹೆಸರು. ವಾಸ್ತವವಾಗಿ ಕೃತಕ ನಿದ್ರೆಯಲ್ಲಿ ಇಂತಹ ಅದ್ಭುತಗಳಾಗಲಿ, ಪವಾಡಗಳಾಗಲಿ ನಡೆಯುವುದಿಲ್ಲ. ಇದು ಕೇವಲ ಒಬ್ಬ ಮನುಷ್ಯ ಇನ್ನೊಬ್ಬನಲ್ಲಿ ಕಲ್ಪಿಸುವ ನಿದ್ರೆ ಮಾತ್ರವಾದುದರಿಂದ ಇದಕ್ಕೆ ಕೃತಕ ನಿದ್ರೆ ಎಂಬ ಹೆಸರೇ ಸಾಧಾರಣವಾಗಿ ಸರಿ ಎಂದು ಒಪ್ಪುತ್ತಾರೆ. ಮತ್ತೆ ಕೆಲವರು ಇದು ವ್ಯಕ್ತಿಯ ಗಮನದ ಕೇಂದ್ರೀಕರಣ ಅಥವಾ ಆಕರ್ಷಣ ಮಾತ್ರವೆಂದೂ ಹೇಳುತ್ತಾರೆ. ಈ ಲಕ್ಷಣಗಳೂ ಕೃತಕನಿದ್ರೆಯಲ್ಲಿರುವುದರಿಂದ ಈ ಹೆಸರೂ ಒಂದು ವಿಧದಲ್ಲಿ ಸರಿ ಎಂದು ಹೇಳಬಹುದು. ಇನ್ನು ಕೃತಕ ನಿದ್ರೆಯನ್ನು ಒಬ್ಬ ವ್ಯಕ್ತಿಯಲ್ಲಿ ಕಲ್ಪಿಸುವ ವಿಧಾನವನ್ನೂ, ಅದರ ಲಕ್ಷಣವನ್ನೂ ಸ್ವಲ್ಪ ವಿಶದವಾಗಿ ಗಮನಿಸಿದರೆ ಮೇಲಿನ ಅಭಿಪ್ರಾಯಗಳ ಔಚಿತ್ಯವು ತಾನಾಗಿಯೇ ವಿಶದವಾಗುತ್ತದೆ.

ಕೃತಕ ನಿದ್ರೆಯನ್ನು ಕಲ್ಪಿಸಬೇಕೆಂದಿರುವ ಮನೋವಿಜ್ಞಾನಿಯು ಒಬ್ಬ ವ್ಯಕ್ತಿಯನ್ನು ಒಂದು ಹಾಸಿಗೆಯ ಮೇಲಾಗಲೀ, ಆರಾಮಕುರ್ಚಿಯ ಮೇಲಾಗಲೀ ಕುಳಿತುಕೊಳ್ಳುವಂತೆ ಹೇಳುತ್ತಾನೆ. ಇದರ ಉದ್ದೇಶ ಆ ವ್ಯಕ್ತಿಯ ಶರೀರ ಮತ್ತು ಅವಯವಗಳು ಸಂಪೂರ್ಣವಾಗಿ ವಿಶ್ರಾಂತಿ ಸ್ಥಿತಿಯಲ್ಲಿರಬೇಕೆಂಬುದೆ. ಹೀಗೆ ಕುಳ್ಳಿರಿಸಿದನಂತರ ಮನೋವಿಜ್ಞಾನಿಯು ಅವನೆದುರಿಗೆ ನಿಂತು ಅವನ ಶರೀರದ ಸರ್ವಾವಯವಗಳಿಗೂ, ಮಾಂಸಖಂಡಗಳಿಗೂ ವಿಶ್ರಾಂತಿ ದೊರೆಯುವಂತೆ ಸಡಿಲಬಿಡೆಂದು ಹೇಳುತ್ತಾನೆ. ಆಮೇಲೆ ಮೂಗಿನ ಮಟ್ಟಕ್ಕೆ ತನ್ನ ತೋರು ಬೆರಳನ್ನು ಒಂದೆರಡು ಗಜದ ದೂರದಲ್ಲಿ ಹಿಡಿದು ಅದನ್ನೇ ನೆಟ್ಟದೃಷ್ಟಿಯಿಂದ ರೆಪ್ಪೆ ಬಡಿಯದೆ ನೋಡುತ್ತಿರುವಂತೆ ಹೇಳುತ್ತಾನೆ. ಅನಂತರ ಏರಿಳಿತಗಳಿಲ್ಲದ ಒಂದೇ ಧ್ವನಿಯಲ್ಲಿ ಅರ್ಥಸಹಿತವಾದ ಅಥವಾ ಅರ್ಥರಹಿತವಾದ ಕೆಲವು ಪದಗಳನ್ನು ಒಂದೇಸಮನೆ ಉಚ್ಚರಿಸುತ್ತಿರುತ್ತಾನೆ. ನೆಟ್ಟದೃಷ್ಟಿಯಿಂದ ಬೆರಳನ್ನು ನೋಡುತ್ತಿರುವುದರಿಂದ ಕಣ್ಣುಗಳಿಗೂ, ಏರಿಳಿತಗಳಿಲ್ಲಿದ ಒಂದೇ ಬಗೆಯ ರಾಗದ ಮಾತುಗಳನ್ನು ಕೇಳುತ್ತಿರುವುದರಿಂದ ಕಿವಿಗಳಿಗೂ, ಇವುಗಳೆರಡರ ಮೇಲೂ ಗಮನವನ್ನಿಟ್ಟಿರುವುದರಿಂದ ಮನಸ್ಸಿಗೂ ಬಹಳ ಬೇಗ ಆಯಾಸವಾಗುತ್ತದೆ. ಈ ಆಯಾಸದ ಫಲವಾಗಿ ಆ ವ್ಯಕ್ತಿಗೆ ನಿದ್ರೆ ಬರುತ್ತಿರುವಂತೆ ಭಾಸವಾಗುತ್ತದೆ.(ಮಕ್ಕಳಿಗೆ ತೊಟ್ಟಿಲು ತೂಗುವಾಗ ಜೋಗುಳವನ್ನು ಹಾಡುವುದೂ ಇದೇ ಉದ್ದೇಶದಿಂದಲೇ) ಇದನ್ನರಿತ ವಿಜ್ಞಾನಿಯು "ನಿನಗೆ ಈಗ ನಿದ್ರೆ ಬರುವಂತಿದೆಯಲ್ಲವೆ"? ಎಂದು ಕೇಳುತ್ತಾನೆ. ಅದಕ್ಕೆ ಅವನು ಹೌದೆನ್ನುತ್ತಾನೆ. ಕ್ರಮಕ್ರಮವಾಗಿ ಆತನಿಗೆ ನಾನಾ ಬಗೆಯಾದ

ಸೂಚನೆಗಳನ್ನು ಕೊಟ್ಟು ಅವನ ಮನಸ್ಸು ತನ್ನ ಕಡೆಗೆ ವಾಲುತ್ತಿರುವುದನ್ನು ದೃಢಪಡಿಸಿಕೊಳ್ಳುತ್ತಾನೆ. ಈ ಸ್ಥಿತಿಯಲ್ಲಿರುವಾಗ ಆ ವ್ಯಕ್ತಿಯು ವಿಜ್ಞಾನಿಯು ಕೊಡುವ ಎಲ್ಲ ಸೂಚನೆಗಳನ್ನೂ ಯಂತ್ರದಂತೆ ನಡೆಸುತ್ತಾನೆ. ಕಾಲಕ್ರಮದಲ್ಲಿ ಇಬ್ಬರ ಮನಸ್ಸೂ ಒಂದು ಬಗೆಯಾದ ಸಮನ್ವಯಕ್ಕೆ ಬಂದು ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಇದಕ್ಕೆ “ ಮನಸ್ಸಂಯೋಜನೆ ” ಎಂದು ಹೆಸರು.

ಹೀಗೆ ಕೃತಕನಿದ್ರೆಯನ್ನು ಕಲ್ಪಿಸುವವನನ್ನು ಪ್ರೇರಕನೆಂದೂ, ನಿದ್ರೆಗೆ ವಶನಾದ ವ್ಯಕ್ತಿಯನ್ನು ಪ್ರೇರಿತನೆಂದೂ ಕರೆಯುವರು. ಇಂತಹ ನಿದ್ರೆಗೆ ಪ್ರೇರಣೆಯೆಂದೂ ಮತ್ತೊಂದು ಹೆಸರು. ಈ ಪ್ರೇರಣೆ ನಾನಾ ಅವಸ್ಥೆಗಳಲ್ಲಿ, ನಾನಾ ರೀತಿಯಾಗಿ ಬಹು ವಿಚಿತ್ರವಾದ ಲಕ್ಷಣಗಳನ್ನು ಪಡೆದಿರುತ್ತದೆ. ಇವುಗಳಲ್ಲಿ ಅತ್ಯಂತ ಗಮನಾರ್ಹವಾದುದೆಂದರೆ ನಿದ್ರಾಸಮಯದಲ್ಲೂ, ನಿದ್ರಾನಂತರದಲ್ಲೂ ಪ್ರೇರಿತನು ತೋರಿಸುವ ಸ್ವಭಾವ ಮತ್ತು ನಡವಳಿಕೆ. ಈ ಕೃತಕ ನಿದ್ರೆಯನ್ನು ಉಪಯೋಗಿಸಿಕೊಂಡು ಮನೋವಿಜ್ಞಾನಿಗಳು ಮನೋವಿಶ್ಲೇಷಣವನ್ನು ಮಾಡಲು ಪ್ರಯತ್ನಿಸಿದ್ದಾರೆ. ಅಲ್ಲದೆ ಅನೇಕವೇಳೆ ಬಹಳ ಅದ್ಭುತವಾದ ಯಶಸ್ಸನ್ನು ಗಳಿಸಿದ್ದಾರೆ. ಅನೇಕ ಮಾನಸಿಕ ವೈಪರೀತ್ಯಗಳ ಕಾರಣಗಳನ್ನು ಕಂಡುಹಿಡಿದು ಅವುಗಳ ನಿವಾರಣೆಯನ್ನು ಇವುಗಳ ಮುಖಾಂತರ ಮಾಡಿದ್ದಾರೆ. ಬಹಳ ಪ್ರಬಲವಾದ ಮಾನಸಿಕ ರೋಗರುಜಿನಗಳನ್ನು ವಾಸಿಮಾಡಲು ಈ ಕೃತಕ ನಿದ್ರೆ ಬಹಳ ಸಹಕಾರಿಯಾಗಿದೆ. ಈ ಸಂದರ್ಭದಲ್ಲಿ ಕೆಲವು ನಿದರ್ಶನಗಳನ್ನು ಪರಿಶೀಲಿಸುವುದು ಅನುಚಿತವಾಗಲಾರದು. ಪ್ರಪಂಚದ ಒಂದನೆಯ ಮಹಾಯುದ್ಧದ ಸಮಯದಲ್ಲಿ ನಡೆದ

ಕೆಲವು ವಿಚಿತ್ರ ಘಟನೆಗಳನ್ನು ಮನಶ್ಶಾಸ್ತ್ರಜ್ಞರು ಈ ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ. ಯುದ್ಧ ಭೂಮಿಯಲ್ಲಿ ಇದ್ದ ಒಬ್ಬ ಸಿಪಾಯಿಗೆ ಒಂದು ಬಾಂಬಿನ ಸಿಡಿತದ ಶಬ್ದ ಕೇಳಿದ ಕೂಡಲೆ ಜ್ಞಾನತಪ್ಪಿ ಕೆಳಕ್ಕೆಬಿದ್ದನು. ಆ ಸ್ಥಿತಿಯಲ್ಲಿ ಅವನನ್ನು ಸಮೀಪದ ಮಿಲಿಟರಿ ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಅವನು ಎಚ್ಚರಗೊಂಡ ಮೇಲೆ ಅವನಲ್ಲಿ ಸಂಪೂರ್ಣವಾದ ಸ್ಮೃತಿನಾಶವೇರ್ಪಟ್ಟಿದ್ದಿತು. ತನ್ನ ಹಿಂದಿನ ಜೀವನದ ಯಾವ ಒಂದು ಘಟನೆಯ ನೆನೆಪಾಗಲೀ ಅವನಿಗೆ ಇರಲಿಲ್ಲ. ಅವನ ಹೆಸರನ್ನಾಗಲೀ ತನ್ನ ಮನೆಯ ವಿಳಾಸವನ್ನಾಗಲೀ ಹೇಳಲಾರದವನಾಗಿದ್ದನು. ಹೀಗೆಯೇ ಕೆಲವುಕಾಲ ಕಳೆದ ಮೇಲೆ ಒಂದುದಿನ ಆಸ್ಪತ್ರೆಯ ತನ್ನ ವಾರ್ಡಿನ ಕಿಟಕಿಯ ಮುಖಾಂತರ ಕೆಲವು ಉಕ್ಕಿನ ಕುಲಾವಿಗಳನ್ನು ಧರಿಸಿದ್ದ ಸೈನಿಕರನ್ನು ನೋಡಿದನು. ಕೂಡಲೆ ಅವರ ವಿಚಾರದಲ್ಲಿ ತೀವ್ರವಾದ ಆಸಕ್ತಿಯನ್ನು ತೋರಿಸಿದನು. ಅವನ ಸ್ಮರಣಶಕ್ತಿ ಮತ್ತೆ ಬಂದು ಎಲ್ಲವನ್ನೂ ಈಗ ನೆನೆಸಿಕೊಳ್ಳಲು ಸಾಧ್ಯವಾಯಿತು. ಇಲ್ಲಿ ಬಾಂಬಿನ ಸಿಡಿತದಿಂದ ಮನಸ್ಸಿಗಾದ ಅಪಘಾತವೇ ದೂರ್ವಾಸ ಶಾಪ ಸಮಾನವಾದ ಸ್ಮೃತಿ ನಾಶಕ್ಕೆ ಕಾರಣ. ಉಕ್ಕಿನ ಕುಲಾವಿಗಳ ದರ್ಶನವೇ ಅಭಿಜ್ಞಾನಾಂಗುಲೀಯಕದ ದರ್ಶನ. ಬಾಂಬಿನ ಸಿಡಿತದ ಅಪಘಾತದಿಂದ ಕಡಿದುಹೋಗಿದ್ದ ಒಳಮನಸ್ಸು ಮತ್ತು ಹೊರಮನಸ್ಸುಗಳ ಸಂಬಂಧವು ಉಕ್ಕಿನ ಕುಲಾವಿಗಳನ್ನು ನೋಡಿದ ಮಾತ್ರದಿಂದ ಮತ್ತೆ ಏರ್ಪಟ್ಟಿತು. "ರವಿಕಾಣದುದನ್ನು ಕವಿ ಕಂಡ"ನೆಂಬಂತೆ ಮನೋವಿಜ್ಞಾನಿಗಳು ಇತ್ತೀಚೆಗೆ ಕಂಡುಹಿಡಿದಿರುವ ಇಂತಹ ಮಾನಸಿಕ ವ್ಯಾಪಾರಗಳನ್ನು ಕಾಳಿದಾಸ ಕವಿಯು ಮೊದಲೇ ಕಂಡಿದ್ದನು.

ಇನ್ನು ಮನೋವಿಶ್ಲೇಷಣದಲ್ಲಿ ಕೃತಕ ನಿದ್ರೆಯ ಉಪಯೋಗವನ್ನು ಪರೀಕ್ಷಿಸೋಣ. ಯುದ್ಧಭೂಮಿಯಲ್ಲಿ ಮೂರ್ಛೆಗೊಂಡ ಮತ್ತೊಬ್ಬ ಸೈನಿಕನನ್ನು ಜ್ಞಾನತಪ್ಪಿದ ಸ್ಥಿತಿಯಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆತನು ಎಚ್ಚೆತ್ತ ಮೇಲೆ ವೈದ್ಯ ಪರೀಕ್ಷೆ ನಡೆಸಲು ದೈಹಿಕವಾಗಿಯಾಗಲಿ, ಮಾನಸಿಕವಾಗಿಯಾಗಲಿ ಯಾವ ವಿಧವಾದ ಅಪಘಾತವನ್ನು ಅವನು ಹೊಂದಿದ್ದಂತೆ ಕಂಡುಬರಲಿಲ್ಲ. ಆದರೂ ಆತನು ಎಲ್ಲರಂತೆ ಸಾಮಾನ್ಯವಾಗಿ ನಡೆಯಲಾರದವನಾಗಿದ್ದನು. ನಡೆಯುವಾಗ ಕಾಲುಗಳನ್ನು ಅಗಲಿಸಿ ನಡೆಯುತ್ತಿದ್ದನು. ನರಗಳಾಗಲಿ, ಎಲುಬುಗಳಾಗಲಿ ಹೊರಳದೆ, ಸ್ಥಳಪಲ್ಲಟವಾಗದೆ ಇದ್ದುದರಿಂದ ಇದಕ್ಕೆ ದೈಹಿಕವಾದ ಯಾವ ಕಾರಣವನ್ನೂ ಕೊಡಲಾಗಲಿಲ್ಲ. ಆಗ ಈ ವ್ಯಕ್ತಿಯನ್ನು ಒಬ್ಬ ಮನೋವಿಜ್ಞಾನಿಯು ಕೃತಕ ನಿದ್ರೆಗೆ ಒಳಪಡಿಸಿದನು. ಅನಂತರ ಅವನ ನಡಿಗೆಯ ಅವ್ಯವಸ್ಥೆಗೆ ಕಾರಣವನ್ನು ಕಂಡುಹಿಡಿಯಲು ಉಚಿತವಾದ ಅನೇಕ ಪ್ರಶ್ನೆಗಳನ್ನು ಕೇಳಿದನು. ಆ ಪ್ರಶ್ನೆಗಳ ಫಲವಾಗಿ ಅವನು ಸಾಧಾರಣವಾಗಿ ನೆನೆಸಿಕೊಳ್ಳಲು ಸಾಧ್ಯವಾಗದ ಕೆಲವು ಘಟನೆಗಳನ್ನು ಸ್ಮರಣೆಗೆ ತಂದುಕೊಂಡು ತನ್ನ ಆ ಬಗೆಯ ನಡಿಗೆಗೆ ಕಾರಣವಾದ ಸಂದರ್ಭಗಳನ್ನು ಹೊರಗೆಡಹಿದನು. ಅವು ಈ ರೀತಿ ಇದ್ದವು :– ಒಂದು ದಿನ ಯುದ್ಧಭೂಮಿಯು ಶಾಂತವಾಗಿದ್ದಾಗ ತಾನು ಇರಬೇಕಾದ ಹಳ್ಳದಲ್ಲಿ ಸಿದ್ಧನಾಗಿ ನಿಂತಿದ್ದನು. ಯುದ್ಧವಾಗುವ ಲಕ್ಷಣಗಳು ಕಂಡುಬರಲಿಲ್ಲವಾದ ಕಾರಣ ಕ್ಷೌರ ಮಾಡಿಕೊಳ್ಳಲು ಸಿದ್ಧನಾದನು. ಅದಕ್ಕಾಗಿ, ಮಳೆಯ ಕಾರಣದಿಂದಾಗಿ ಹಳ್ಳದಲ್ಲಿ ನಿಂತಿದ್ದ ನೀರನ್ನು ಕನ್ನಡಿಯಾಗಿ ಉಪಯೋಗಿಸಿಕೊಳ್ಳಲು ಕಾಲುಗಳನ್ನು ದೂರವಾಗಿಟ್ಟು

ಕೊಂಡು ಬಗ್ಗಿ ಕ್ಷೌರ ಮಾಡಿಕೊಳ್ಳಲುದ್ಯುಕ್ತನಾದನು. ಆ ವೇಳೆಗೆ ಸರಿಯಾಗಿ ಒಂದು ಬ್ಯಾಂಬು ಸಿಡಿದುದರಿಂದ ಮೂರ್ಛೆ ಬಿದ್ದನು. ಈ ಕಾರಣವನ್ನು ಅವನಿಗೆ ತಿಳಿಸಿದ ಕೂಡಲೆ ಅವನಲ್ಲಿದ್ದ ಅಕ್ರಮ ನಡಿಗೆಯು ತಪ್ಪಿ ಎಲ್ಲರಂತೆ ಮೊದಲಿನ ಹಾಗೆ ನಡೆಯುವುದು ಸಾಧ್ಯವಾಯಿತು. ಹೀಗೆ ಕೃತಕ ನಿದ್ರೆಯು ಮಾನಸಿಕರೋಗದ ಕಾರಣವನ್ನು ಕಂಡುಹಿಡಿಯು ವುದಕ್ಕೂ, ನಿವಾರಣೆಗೂ ಅನುಕೂಲವಾಯಿತು. ಒಬ್ಬ ಪ್ರಸಿದ್ಧನಾದ ಭೂ ಸಂಶೋಧಕನು ದೀರ್ಘಕಾಲ ಸೇವೆಯನ್ನು ಸಲ್ಲಿಸಿ ನಿವೃತ್ತಿ ಹೊಂದಿದನಂತರ ತಾನು ಹುಟ್ಟಿ ಬೆಳೆದ ಊರಿಗೆ ಹಿಂತಿರುಗಿದನು. ಒಮ್ಮೆ ತಾನು ಹಿಂದೆ ವ್ಯಾಸಂಗ ಮಾಡಿದ ಶಾಲೆಗೆ ಭೇಟಿಕೊಟ್ಟನು. ಆ ಶಾಲೆಯ ಮಹಡಿಯ ಮೆಟ್ಟಲನ್ನು ಸಮೀಪಿಸಿದ ಕೂಡಲೆ ಆತನಲ್ಲಿ ಒಂದು ವಿಚಿತ್ರ ರೀತಿಯ ಪ್ರವೃತ್ತಿಯಾಯಿತು. ಆ ಮೆಟ್ಟಲುಗಳ ಮೇಲೆ ವೇಗವಾಗಿ ಹತ್ತಿ ಇಳಿಯುವುದಕ್ಕೂ ಕುಣಿಯುವುದಕ್ಕೂ ಪ್ರಾರಂಭಿಸಿದನು. ಆ ವಯಸ್ಸಿನಲ್ಲಿ ಆತನ ವಿಚಿತ್ರ ವರ್ತನೆಯನ್ನು ಕಂಡು ಆಶ್ಚರ್ಯಗೊಂಡ ಕೆಲವರು ಆತನನ್ನೇ ಅದಕ್ಕೆ ಕಾರಣವನ್ನು ಪ್ರಶ್ನಿಸಲು ಏನನ್ನೂ ಹೇಳುವುದಕ್ಕೆ ಅಶಕ್ತನಾಗಿದ್ದನು. ಕೊನೆಗೆ ಒಬ್ಬ ಮನೋವಿಜ್ಞಾನಿಯ ಬಳಿಗೆ ಕರೆದೊಯ್ದು, ಅವನಲ್ಲಿ ಕೃತಕನಿದ್ರೆಯನ್ನು ಕಲ್ಪಿಸಲಾಯಿತು. ಆಗ ಅವನನ್ನು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ ಅವನ ಪೂರ್ವ ವೃತ್ತಾಂತದ ವಿವರಗಳು ಹೊರಬಿದ್ದವು. ಅವನು ಆ ಶಾಲೆಯಲ್ಲಿ ಓದುತ್ತಿದ್ದಾಗ ಅದೇ ಶಾಲೆಗೆ ಬರುತ್ತಿದ್ದ ಒಬ್ಬ ಯುವತಿಯನ್ನು ಪ್ರೇಮಿಸಿದ್ದನೆಂದೂ, ಆದರೆ ಆಕೆಯು ಇವನು ಬಹಳ ದುರ್ಬಲನೂ, ಕೃಶಾಂಗನೂ ಎಂಬ ಕಾರಣದಿಂದ

ಇವನನ್ನು ಮದುವೆಯಾಗಲು ನಿರಾಕರಿಸಿದಳೆಂದೂ ತಿಳಿದು ಬಂತು. ಅವನ ಒಳಮನಸ್ಸು ಆ ಅನುಭವದ ಪ್ರಭಾವದಿಂದ ತಾನು ಕೃಶಾಂಗನಲ್ಲವೆಂದೂ, ಬಲಿಷ್ಠನೆಂದೂ ತೋರಿಸಿ ಕೊಳ್ಳಲು ಅಲ್ಲಿ ಕುಣಿದಾಡಲು ಪ್ರೇರೇಪಿಸಿತೆಂದು ಮನೋ ವಿಜ್ಞಾನಿಯು ವಿವರವನ್ನು ಕೊಟ್ಟ ಕೂಡಲೇ ಅವನಲ್ಲಿ ಕುಣಿ ಯುವ ಪ್ರವೃತ್ತಿ ಮಾಯವಾಯಿತು. ಎಲ್ಲರಂತೆ ಮೆಟ್ಟಲನ್ನು ಹತ್ತಿ ಇಳಿಯಲು ಸಾಧ್ಯವಾಯಿತು. ಈ ಎರಡು ನಿದರ್ಶನ ಗಳಿಂದ ಕೃತಕನಿದ್ರೆಯನ್ನು ಹೇಗೆ ಮಾನಸಿಕ ರೋಗಗಳ ನಿವಾರಣೆಗೆ ಉಪಯೋಗಿಸಿಕೊಳ್ಳಬಹುದೆಂದು ಸ್ಪಷ್ಟವಾಗು ವುದು.

ಇನ್ನು ಕೃತಕನಿದ್ರೆಯ ಸಮಯದಲ್ಲಿ ಪ್ರೇರಿತನ ನಡವಳಿಕೆ ಯನ್ನು ಸ್ವಲ್ಪ ವಿಮರ್ಶಿಸೋಣ. ಕೃತಕನಿದ್ರೆಯಲ್ಲಿರುವ ಪ್ರೇರಿತನ ಮನಸ್ಸು ಪ್ರೇರಕನ ಸಂಪೂರ್ಣ ಪ್ರಭಾವಕ್ಕೆ, ಕ್ರಮ ಕ್ರಮವಾಗಿ ಒಳಪಡುವುದೆಂದು ಹೇಳಿದೆಯಷ್ಟೆ. ಹೀಗೆ ಅವರಿ ಬ್ಬರ ನಡುವೆ ಮನಸ್ಸಂಪರ್ಕವೇರ್ಪಟ್ಟ ಮೇಲೆ ಪ್ರೇರಿತನು ಪ್ರೇರಕನ ಕೈಗೊಂಬೆಯಂತೆ ಆಗುತ್ತಾನೆ. ಅವನು ಹೇಳಿದ ಎಲ್ಲ ಕೆಲಸಗಳನ್ನೂ ಯಾಂತ್ರಿಕವಾಗಿ ಮಾಡುತ್ತಾನೆ. ಇಲ್ಲಿ ಒಂದು ವಿಚಿತ್ರವೆಂದರೆ ಕೃತಕನಿದ್ರೆ ಸಾಮಾನ್ಯನಿದ್ರೆಯಂತಿ ದ್ದರೂ, ಪ್ರೇರಿತನು, ಪ್ರೇರಕನ ವಿಚಾರದಲ್ಲಿ ಮಾತ್ರ ಎಚ್ಚರ ವಾಗಿರುತ್ತಾನೆ. ಅವರಿರುವ ಪ್ರಯೋಗಶಾಲೆಯಲ್ಲಿ ಯಾರು ಬಂದರೂ, ಏನು ಶಬ್ದವಾದರೂ ಅವನು ಗಮನಿಸಲಾರದವ ನಾಗಿರುತ್ತಾನೆ. ಮೂರನೆಯ ವ್ಯಕ್ತಿಯೊಬ್ಬನು ಬಂದು ಪಕ್ಕದ ಕುರ್ಚಿಯಲ್ಲಿ ಕುಳಿತರೂ ಅವನಿಗೆ ತಿಳಿಯುವುದಿಲ್ಲ. ಅಷ್ಟೇ ಅಲ್ಲ; ಪ್ರೇರಕನು ಅವನನ್ನು ಬೇರೇ ವ್ಯಕ್ತಿಯು ಕುಳಿತಿರುವ

ಕುರ್ಚಿಯಲ್ಲಿ ಕುಳಿತುಕೊಳ್ಳುವಂತೆ ಹೇಳಿದರೆ ತಕ್ಷಣವೇ ಆ ವ್ಯಕ್ತಿಯು ತೊಡೆಯ ಮೇಲೆ ಕುಳಿತುಕೊಳ್ಳುತ್ತಾನೆ. ಆದರೆ ಪ್ರೇರಕನೇ ಅಲ್ಲೊಬ್ಬ ವ್ಯಕ್ತಿಯಿರುವನೆಂದು ತಿಳಿಸಿದರೆ ಆಗ ಆ ವಿಷಯವು ಅವನಿಗೆ ಅರಿವಾಗುತ್ತದೆ. ಇದರಿಂದ ಪ್ರೇರಿತನ ಮನಸ್ಸು ಸಂಪೂರ್ಣವಾಗಿ ಪ್ರೇರಕನ ಹತೋಟಿಯಲ್ಲಿರುವುದೆಂದು ಸ್ಪಷ್ಟವಾಗುತ್ತದೆ. ಒಮ್ಮೆ ಪ್ರೇರಿತನ ಮೇಲೆ ಮತ್ತೊಂದು ಪ್ರಯೋಗವನ್ನು ನಡೆಸುವುದೂ ಉಂಟು. ಪ್ರೇರಕನು ಪ್ರೇರಿತನಿಗೆ ತನ್ನ ಎರಡು ಕೈಗಳನ್ನು ಸೇರಿಸಿ ಹಿಡಿದುಕೊಳ್ಳುವಂತೆ ಹೇಳುತ್ತಾನೆ; ಅನಂತರ ಆತನು ಎಷ್ಟು ಪ್ರಯತ್ನಪಟ್ಟಾಗ್ಯೂ ಅದನ್ನು ಬಿಡಿಸಿಕೊಳ್ಳಲು ಅಸಾಧ್ಯವೆಂದು ಸೂಚಿಸುತ್ತಾನೆ. ಪ್ರೇರಿತನನ್ನು ಹಾಗೆ ಬಿಡಿಸಿಕೊಳ್ಳಲು ಸರ್ವಪ್ರಯತ್ನಮಾಡುವಂತೆ ಪ್ರೇರಕನು ಹೇಳುತ್ತಾನೆ. ಆಗ ಪ್ರೇರಿತನಿಗೆ ಒಂದು ವಿಚಿತ್ರ ಅನುಭವವಾಗುತ್ತದೆ. ಪ್ರೇರಕನು ಹೇಳಿದಂತೆ ತಾನು ಎಷ್ಟೇ ಪ್ರಯತ್ನಪಟ್ಟರೂ ಪ್ರೇರಿತನು ತನ್ನ ಕೈಗಳನ್ನು ಬಿಡಿಸಿಕೊಳ್ಳಲು ಅಶಕ್ತನಾಗುತ್ತಾನೆ. ಹೀಗೆ ಆಗುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಇದು ಅದ್ಭುತವಾಗಿ ಕಂಡರೂ ಇಲ್ಲಿ ಯಾವ ಮಾಟವಾಗಲಿ ಮಂತ್ರವಾಗಲಿ ಇಲ್ಲ. ಹೀಗೆ ಕೈಗಳನ್ನು ಬಿಡಿಸಿಕೊಳ್ಳಲು ಆಗದೆ ಇರುವುದಕ್ಕೆ ಕಾರಣ ಇಷ್ಟೆ. ಪ್ರೇರಕನು ಮಾಡುವ ಪ್ರೇರಣೆ ಒಳಮನಸ್ಸಿಗೆ, ಅದರ ಪ್ರಭಾವ ಪ್ರಬಲವಾಗಿದ್ದು ಹೊರಮನಸ್ಸಿನ ಪ್ರಯತ್ನ ನಿಷ್ಫಲವಾಗುತ್ತದೆ. ಹೊರಮನಸ್ಸು ಕೈಗಳ ಮಾಂಸಖಂಡಗಳಿಗೆ ಬೇರ್ಪಡಿಸುವಂತೆ ಆಜ್ಞೆ ನೀಡಿದರೂ, ಒಳಮನಸ್ಸು ಅದಕ್ಕಿಂತ ಪ್ರಬಲವಾದ ಶಕ್ತಿಯನ್ನು ಅದೇ ಮಾಂಸಖಂಡಗಳ ಮೇಲೆ ಪ್ರತಿಕೂಲವಾಗಿ ಪ್ರಯೋಗಿಸುವುದರಿಂದ ಈ ಸ್ಥಿತಿ ಏರ್ಪಡು

ತ್ತದೆ. ಇಂತಹ ಒಂದು ಕಾರ್ಯವು ನಡೆಯುವುದು “ ವಿಪರೀತ ಪ್ರಯತ್ನನಿಯಮದ ಫಲವಾಗಿ ”. ಕೆಲವು ವೇಳೆ ಪ್ರೇರಕನಲ್ಲದ ಒಬ್ಬ ಬೇರೆ ವ್ಯಕ್ತಿಯು ಪ್ರೇರಿತನಿಗೆ ಸಲಹೆಗಳನ್ನು ಕೊಡುವುದುಂಟು. ಇವು ಸಫಲವಾಗಬೇಕಾದರೆ ಪ್ರೇರಕನ ಸಹಕಾರ ಅತ್ಯಾವಶ್ಯಕ. ಅವನ ಸಹಕಾರವಿಲ್ಲದೆ ಹೋದರೆ ಬೇರೆಯವನ ಎಲ್ಲ ಪ್ರಯತ್ನವೂ ವಿಫಲವಾಗುತ್ತದೆ. ಇದಕ್ಕೆ ನಿದರ್ಶನವಾಗಿ ಈ ಕೆಳಗಿನ ಪ್ರಯೋಗವನ್ನು ಹೇಳಬಹುದು. ಪ್ರೇರಕನು ಪ್ರೇರಿತನಿಗೆ ತನ್ನ ಮುಷ್ಟಿಯನ್ನು ಬಿಗಿ ಹಿಡಿದು ತಾನು ನಿಲ್ಲಿಸೆಂದು ಹೇಳುವವರೆಗೂ ಚಕ್ರಾಕಾರವಾಗಿ ಸುತ್ತುತ್ತಿರುವಂತೆ ಹೇಳುತ್ತಾನೆ. ಆತನು ಹಾಗೆ ಮಾಡಲು ಉಪಕ್ರಮಿಸಿದ ಸ್ವಲ್ಪ ಹೊತ್ತಿನಲ್ಲೇ ಅಲ್ಲಿರುವ ಬೇರೊಬ್ಬ ವ್ಯಕ್ತಿಯು ಆ ರೀತಿ ಮಾಡುವುದು ಹಾಸ್ಯಾಸ್ಪದವೆಂದು ಅದನ್ನು ನಿಲ್ಲಿಸಬೇಕೆಂದು ಪ್ರೇರಿತನಿಗೆ ಹೇಳುತ್ತಾನೆ. ಪ್ರೇರಿತನು ಎಷ್ಟೇ ಪ್ರಯತ್ನ ಪಟ್ಟಾಗ್ಯೂ ಆತನಿಗೆ ತಿಳಿಯದಂತೆಯೇ ತನ್ನ ಮುಷ್ಟಿ ಚಕ್ರಾಕಾರವಾಗಿ ಸುತ್ತುತ್ತಲೇ ಇರುತ್ತದೆ. ಅನಂತರ ಪ್ರೇರಕನು ತಾನು ತನ್ನ ಹಣೆಯನ್ನು ಐದು ಬಾರಿ ಮುಟ್ಟಿಕೊಂಡ ಮೇಲೆ ಪ್ರೇರಿತನೂ ಹಾಗೆ ತನ್ನ ಮುಷ್ಟಿಯನ್ನು ತಿರುಗಿಸುವುದನ್ನು ನಿಲ್ಲಿಸುವುದು ಸಾಧ್ಯವೆಂದು ಸೂಚಿಸುತ್ತಾನೆ. ಆ ಮೇಲೆ ಸ್ವಲ್ಪಹೊತ್ತು ಮೂವರು ಬೇರೆ ಬೇರೆ ವಿಷಯಗಳನ್ನು ಚರ್ಚಿಸುತ್ತಾ ಕುಳಿತಿರುತ್ತಾರೆ. ಆ ಸಮಯದಲ್ಲೆಲ್ಲಾ ಪ್ರೇರಿತನು ಮುಷ್ಟಿಯನ್ನು ಸುತ್ತುತ್ತಲೇ ಇರುತ್ತಾನೆ. ಈ ಅವಧಿಯಲ್ಲಿ ಪ್ರಾಸಂಗಿಕವಾಗಿ ಆಕಸ್ಮಿಕವಾಗಿ ಎಂಬಂತೆ ಪ್ರೇರಕನು ತನ್ನ ಹಣೆಯನ್ನು ಐದು ಬಾರಿ ಮುಟ್ಟಿಕೊಳ್ಳುತ್ತಾನೆ. ಕೂಡಲೆ ಸ್ವಿಚ್ ಅದುಮಿದಂತೆ ಐದನೇ ಬಾರಿಗೆ ಪ್ರೇರಿತನ ಮುಷ್ಟಿ

ತಿರುಗುವುದು ತಾನಾಗಿಯೇ ನಿಲ್ಲುತ್ತದೆ. ಇದರಿಂದ ಒಂದಂಶ ಸ್ಪಷ್ಟವಾಗುತ್ತದೆ. ಪ್ರೇರಿತನ ಒಳಮನಸ್ಸು ಪ್ರೇರಕನಿತ್ತ ಸೂಚನೆಯ ವಿವರಗಳನ್ನು ಸೂಕ್ಷ್ಮವಾಗಿ ಗ್ರಹಿಸಿ, ಅದಕ್ಕೆ ಲವ ಲೇಶವೂ ತಪ್ಪದೆ ನಡೆಯುವಂತೆ ಪ್ರೇರಿತನಲ್ಲಿ ಪ್ರವೃತ್ತಿಯ ನ್ನುಂಟುಮಾಡುತ್ತದೆ. ಆತನ ಒಳಮನಸ್ಸು ಐದು ಬಾರಿ ಹಣೆಯನ್ನು ಮುಟ್ಟಿಕೊಂಡಿದ್ದನ್ನು ಲೆಕ್ಕಮಾಡಿಕೊಂಡು ಪ್ರೇರಿತನ ಮಾಂಸಖಂಡಗಳಿಗೆ ಆ ಚಕ್ರಾಕಾರದ ಚಲನೆ ಯನ್ನು ನಿಲ್ಲಿಸುವಂತೆ ಸೂಚಿಸುತ್ತದೆ. ಇದರಿಂದಲೂ ಕೃತಕ ನಿದ್ರೆಯಲ್ಲಿ ಒಳಮನಸ್ಸಿನ ಪ್ರಭಾವವೇ ಹೆಚ್ಚೆಂದು ಸ್ಪಷ್ಟ ವಾಗುತ್ತದೆ.

ಈ ತೆರನಾದ ಒಳಮನಸ್ಸಿನ ಸೂಕ್ಷ್ಮ ಪರಿಶೀಲನೆ ಮತ್ತು ಗ್ರಹಣಶಕ್ತಿಯನ್ನು ತೋರಿಸಲು ವಿಲಿಯಂ ಮೆಕ್ ಡೂಗಲ್ ರವರು ಮಾಡಿದ ಮತ್ತೊಂದು ಸ್ವಾರಸ್ಯವಾದ ಪ್ರಯೋಗವನ್ನು ಇಲ್ಲಿ ಸೂಚಿಸಬಹುದು. ಒಬ್ಬ ವ್ಯಕ್ತಿಯಲ್ಲಿ ಕೃತಕನಿದ್ರೆಯನ್ನು ಕಲ್ಪಿಸಿದ ಮೇಲೆ ಮೆಕ್ ಡೂಗಲ್‌ರು ಆತನೆದುರಿಗೆ ನಿಂತು ಒಂದು ರಟ್ಟಿನ ಮೇಲೆ ಐದು ಬೇರೆ ಬೇರೆ ಬಣ್ಣದ ಸ್ಟಾಂಪು ಗಳನ್ನು ಹಿಡಿದು ತೋರಿಸಿ ಆ ಬಣ್ಣಗಳನ್ನು ಗುರುತಿಸುವಂತೆ ಕೇಳಿದರು. ಪ್ರೇರಿತನು ತಪ್ಪಿಲ್ಲದೆ ಕ್ರಮವಾಗಿ ಸ್ಟಾಂಪುಗಳ ಬಣ್ಣವನ್ನು ಹೇಳಿದನು. ಅನಂತರ ಆತನ ಗಮನವನ್ನು ಬೇರೆ ಕಡೆಗೆ ಸೆಳೆದು ಅವುಗಳನ್ನು ಮರೆಮಾಡಿ, ಆತನಿಗೆ ಮತ್ತೊಂದು ಸಲ ಅವನ್ನು ತೋರಿಸುವುದಕ್ಕೆ ಮೊದಲು ಅವನು ಅವುಗಳಲ್ಲಿ ಮೂರು ಬಣ್ಣದ ಸ್ಟಾಂಪುಗಳನ್ನು ಮಾತ್ರ ನೋಡ ಬಲ್ಲನೆಂದು ಹೇಳಿದರು. ಆಮೇಲೆ ಅವನೆದುರಿಗೆ ಎಲ್ಲ ಐದು ಬಣ್ಣದ ಸ್ಟಾಂಪುಗಳನ್ನು ಹಿಡಿದಿದ್ದರೂ ಕೂಡ ತಾನು ಪ್ರೇರಕನು

ಹೇಳಿದ ಮೂರು ಬಣ್ಣದ ಸ್ಟಾಂಪುಗಳನ್ನು ಮಾತ್ರ ನೋಡುತ್ತಿರುವುದಾಗಿ ಹೇಳಿದನು. ಇದನ್ನು ಮತ್ತಷ್ಟು ಸ್ಥಿರಪಡಿಸಲು ಆ ಐದು ಸ್ಟಾಂಪುಗಳನ್ನು ಸ್ಥಳಪಲ್ಲಟಮಾಡಿ ಮತ್ತೆ ಅವನೆದುರಿಗೆ ಹಿಡಿದಾಗಲೂ ಕೂಡ ಪ್ರೇರಕನು ಹೇಳಿದ ಮೂರು ಬಣ್ಣಗಳನ್ನು ಗುರುತಿಸಿದನೇ ಹೊರತು ಬೇರೆ ಎರಡು ಬಣ್ಣದ ಸ್ಟಾಂಪುಗಳು ಕಣ್ಣೆದುರಿಗೆ ಇದ್ದರೂ ಇಲ್ಲವೆಂದೇ ಹೇಳುತ್ತಿದ್ದನು. ಅನಂತರ ಮೆಕ್‌ಡೂಗಲ್ಲರು ಅವನ ಬೆರಳನ್ನು ಅವನಿಗೆ ಅದೃಶ್ಯವಾಗಿದ್ದ ಸ್ಟಾಂಪುಗಳ ಕೊನೆಗೆ ಸೋಕಿಸಿ ಅವು ಅಲ್ಲಿರುವುವೆಂದು ಹೇಳಿದಾಗ ಅವು ಕ್ರಮೇಣ ಅವನ ದೃಷ್ಟಿಪಥಕ್ಕೆ ಕಾಣಿಸುತ್ತಾ ಬಂದವು.

ಈ ಮೇಲಿನ ಪ್ರಯೋಗಗಳಿಂದ ಒಂದೆರಡು ವಿಷಯಗಳು ಸ್ಪಷ್ಟವಾಗುತ್ತವೆ. ಇವುಗಳಲ್ಲಿ ಮೊದಲನೆಯದು ಪ್ರೇರಕನು ಇದೆ ಅಥವಾ ಇಲ್ಲ ಎಂಬ ವಸ್ತುವನ್ನು ಪ್ರೇರಿತನು ಯಾಂತ್ರಿಕವಾಗಿ ನಂಬುತ್ತಾನೆ. ಎರಡನೆಯದಾಗಿ ಪ್ರೇರಕನು ಇಲ್ಲವೆಂದು ಹೇಳಿದ ಪದಾರ್ಥಗಳು ಹೊರಮನಸ್ಸಿಗೆ ಗೋಚರವಾದರೂ ಒಳಮನಸ್ಸಿಗೆ ಪ್ರೇರಕನು ಮಾಡಿರುವ ಸೂಚನೆಯ ಫಲವಾಗಿ, ಅದು ತನ್ನ ಪ್ರಭಾವವನ್ನು ಬೀರಿ ಹೊರಮನಸ್ಸಿಗೆ ಕಾಣದಂತೆ ಮಾಡುತ್ತದೆ. ಅಂದಮೇಲೆ ಅವನು ಎದುರಿಗಿರುವ, ಕಾಣುವ ಮತ್ತು ಕಾಣದಿರುವ ಎರಡು ಬಗೆಯ ವಸ್ತುಗಳನ್ನು ಕಂಡಿರಲೇ ಬೇಕಲ್ಲವೆ? ಅಲ್ಲದೆ ಪ್ರೇರಕನಿಂದ ನಿಷಿದ್ಧವಾದ ಪದಾರ್ಥಗಳನ್ನು ಅತ್ಯಂತ ಜಾಗರೂಕತೆಯಿಂದ ಗಮನಿಸಿ ಬೇರ್ಪಡಿಸಿ ಅವು ಸ್ಥಳಪಲ್ಲಟವಾದಾಗಲೂ ಕೂಡ, ಅವು ಇಲ್ಲವೆಂದು ಹೇಳುವಷ್ಟು ಗಮನವನ್ನು ಒಳಮನಸ್ಸು ಅವುಗಳ ಕಡೆಗೆ ಹರಿಸಿರಲೇ ಬೇಕು. ಇದರಿಂದಲೂ ಒಳಮನಸ್ಸಿನ ಶಕ್ತಿ ಪ್ರಭಾವಗಳು ಬಹಳ ಚೆನ್ನಾಗಿ ಸ್ಪಷ್ಟಪಡುತ್ತವೆ.

ಕೃತಕನಿದ್ರೆಯ ಸಮಯದಲ್ಲಿ ಪ್ರೇರಿತನ ಮೇಲೆ ಪ್ರೇರಕನ ಪ್ರಭಾವವು ಅತ್ಯಂತ ಪ್ರಬಲವಾದುದು. ಆತನು ಕೊಡುವ ಸೂಚನೆಗಳನ್ನು ಪ್ರೇರಿತನು, ಅವು ಎಷ್ಟೇ ಹಾಸ್ಯಾಸ್ಪದವಾಗಿದ್ದರೂ ನಡೆಸುತ್ತಾನೆ. ಆದರೆ ಇದಕ್ಕೆ ಒಂದು ಮಿತಿಯುಂಟು; ಹೊರತುಂಟು. ಉದಾಹರಣೆಗೆ:—ಪ್ರೇರಿತನು ಈ ರೀತಿಯಾಗಿ ಕೃತಕನಿದ್ರೆಯಲ್ಲಿರುವಾಗ ಒಂದು ವೇಳೆ ಪ್ರಯೋಗಶಾಲೆಗೆ ಬೆಂಕಿ ಬಿದ್ದರೆ ಪ್ರೇರಕನು ಪ್ರೇರಿತನನ್ನು ಅಲ್ಲಿಯೇ ಇರುವಂತೆ ಎಷ್ಟೇ ಹೇಳಿದರೂ ಆ ಮಾತನ್ನು ಉಲ್ಲಂಘಿಸಿ ಪ್ರಾಣವನ್ನು ಉಳಿಸಿಕೊಳ್ಳಲು ಓಡಿಹೋಗುತ್ತಾನೆ. ಇಂತಹ ಸನ್ನಿವೇಶಗಳಲ್ಲಿ ಹೊರಗಿನ ಅಪಾಯದ ಭಯವು ಪ್ರೇರಕನ ಮಾತಿನ ಪ್ರಭಾವಕ್ಕಿಂತಲೂ ಬಲತರವಾದದ್ದು. ಹೀಗೆಯೇ ಪ್ರೇರಿತನ ಸೌಶೀಲ್ಯಕ್ಕೂ, ಸ್ವಾಭಿಮಾನಕ್ಕೂ ಕುಂದು ಬರುವಂತಹ ಪ್ರೇರಣೆಗಳಿಗೂ ಅವನು ವಶನಾಗುವುದಿಲ್ಲ. ಒಮ್ಮೆ ಕೃತಕನಿದ್ರೆಯಲ್ಲಿದ್ದ ಯುವತಿಗೆ ವಿವಸ್ತ್ರಳಾಗೆಂದು ಸಲಹೆ ಕೊಟ್ಟಾಗ ಆಕೆಯು ಆ ನಿದ್ರೆಯಿಂದ ಎಚ್ಚೆತ್ತು ಹೊರಗೆ ಹೊರಟುಹೋದಳು. ಈ ಕಾರಣಗಳಿಂದ ಪ್ರೇರಕನ ಪ್ರಭಾವಕ್ಕೆ ಒಂದು ಎಲ್ಲೆಯುಂಟು ಎಂಬುದು ಸ್ಪಷ್ಟವಾಗುತ್ತದೆ.

ಕೃತಕ ನಿದ್ರಾನಂತರದ ಪ್ರೇರಣೆ

ಇದುವರೆಗೆ ಕೃತಕನಿದ್ರೆಯ ಸಮಯದಲ್ಲಿ ಪ್ರೇರಿತನ ನಡೆವಳಿಕೆಯನ್ನೂ, ಅವನಿಗೂ ಮತ್ತು ಪ್ರೇರಕನಿಗೂ ಇರುವ ಸಂಬಂಧವನ್ನೂ ಪರಿಶೀಲಿಸಿದುದಾಯಿತು. ಈಗ ಪ್ರೇರಕನು ಕೃತಕನಿದ್ರೆಯ ಸಮಯದಲ್ಲಿ ಕೊಟ್ಟ ಕೆಲವು ಸಲಹೆಗಳ

ವಿಷಯದಲ್ಲಿ ಆ ನಿದ್ರೆಯಿಂದ ಎಚ್ಚೆತ್ತ ಮೇಲೆ ಹೇಗೆ ನಡೆದು ಕೊಳ್ಳುವನೆಂಬುದನ್ನು ನೋಡೋಣ. ಪ್ರೇರಕನು ಪ್ರೇರಿತ ನಿಗೆ ಕೃತಕನಿದ್ರಾನಂತರ ಒಂದು ನಿರ್ದಿಷ್ಟಕಾಲದಲ್ಲಿ ಕೆಲವು ಕಾರ್ಯಗಳನ್ನು ಮಾಡಬೇಕೆಂದು ಸೂಚಿಸುತ್ತಾನೆ. ಈ ಸಲಹೆಗಳು ಆತನು ನಿದ್ರೆಯಿಂದ ಎಚ್ಚೆತ್ತ ಮೇಲೆ ಅವನಿಗೆ ನೆನಪಿರುವುದಿಲ್ಲ. ಇದರಿಂದಲೂ ಒಂದಂಶ ಸ್ಪಷ್ಟವಾಗುತ್ತದೆ. ಅದೇನೆಂದರೆ ಕೃತಕನಿದ್ರೆಯಲ್ಲಿ ಮಾಡಿದ ಸಲಹೆಯು ಒಳ ಮನಸ್ಸಿಗಾದುದರಿಂದ ಹೊರಮನಸ್ಸಿಗದರರಿವಿಲ್ಲ. ನಿದ್ರೆ ಯಿಂದ ಎಚ್ಚೆತ್ತ ಮೇಲೆ ಹೊರಮನಸ್ಸು ಅದನ್ನರಿಯಲಾರದು ಅಥವಾ ನೆನಸಿಕೊಳ್ಳಲಾರದು. ಈ ಬಗೆಯ ಮರವಿಗೆ "ಕೃತಕ ನಿದ್ರಾನಂತರದ ವಿಸ್ಮರಣೆ" ಎಂದು ಹೆಸರು. ಆದರೆ ಪ್ರೇರಿತನು ನಿದ್ರೆಯಿಂದ ಎಚ್ಚೆತ್ತ ಮೇಲೆ ಕೂಡ ಒಳ ಮನಸ್ಸಿಗೆ ಕೊಟ್ಟ ಈ ಸಲಹೆಯು ಕಾರ್ಯರೂಪವನ್ನು ಪಡೆಯಲು ಪ್ರಯತ್ನಿಸುತ್ತಲೇ ಇರುತ್ತದೆ. ಹೊರಮನಸ್ಸು ಆ ಪ್ರವೃತ್ತಿಯನ್ನು ಎಷ್ಟು ನಿರೋಧಿಸಿದರೂ ಒಳಮನಸ್ಸು ತನ್ನ ಯತ್ನದಲ್ಲಿ ಜಯವನ್ನು ಪಡೆಯುವವರೆಗೂ ಬಿಡುವುದಿಲ್ಲ. ಒಮ್ಮೆ ಒಬ್ಬ ಮನೋವಿಜ್ಞಾನಿಯು ಪ್ರೇರಿತನೊಬ್ಬನು ಕೃತಕ ನಿದ್ರೆಯಲ್ಲಿರುವಾಗ, ಮಾರನೆಯದಿನ ಅದೇ ಸಮಯಕ್ಕೆ ತನ್ನ ಪ್ರಯೋಗಶಾಲೆಗೆ ಬಂದು, ಅಲ್ಲಿ ಒಂದು ಮೂಲೆಯಲ್ಲಿದ್ದ ಒಂದು ಕುರ್ಚಿಯನ್ನು ಮೆಜಿನ ಮೇಲಿಟ್ಟು ಹೋಗಬೇಕೆಂದು ಸೂಚಿಸಿದನು. ಅನಂತರ ಪ್ರೇರಿತನು ನಿದ್ರೆಯಿಂದ ಎಚ್ಚೆತ್ತ ಮೇಲೆ ತನಗೆ ಅವನು ಮಾಡಿದ ಪ್ರೇರಣೆಯ ಅರಿವೇ ಇರಲಿಲ್ಲ. ಆದರೂ ಮಾರನೆಯ ದಿನ ಅದೇ ಸಮಯಕ್ಕೆ ಸರಿಯಾಗಿ ತನ್ನ ಮನಸ್ಸಿನಲ್ಲಿ ಒಂದು ಬಗೆಯ ಅಶಾಂತಿ ತಲೆದೋರಿ

ತಾನು ಮನೋವಿಜ್ಞಾನಿಯ ಪ್ರಯೋಗಶಾಲೆಗೆ ಹೋಗ ಬೇಕೆಂಬ ಪ್ರವೃತ್ತಿಯುಂಟಾಯಿತು. ಆದರೆ ಇದಕ್ಕೆ ಕಾರಣವೇ ತನಗೆ ತೋರಲಿಲ್ಲವಾದ ಕಾರಣ ಸ್ವಲ್ಪಕಾಲ ಹಿಂಜರಿದನು. ಕೊನೆಗೆ ಈ ಪ್ರವೃತ್ತಿಯ ಪ್ರಾಬಲ್ಯವು ತಡೆಯಲಸಾಧ್ಯವಾಗಲು ಪ್ರಯೋಗಶಾಲೆಗೆ ಹೋಗಿ ಬಾಗಿಲಲ್ಲಿ ನಿಂತನು. ಮನೋ ವಿಜ್ಞಾನಿಯು ಇವನನ್ನು ಕಂಡಕೂಡಲೆ ಏಕೆ ಬಂದೆಯೆಂದು ಕೇಳಲು ಪ್ರೇರಿತನು ತಾನು ಅಲ್ಲಿಗೆ ಬಂದ ಕಾರಣವನ್ನು ಕೊಡಲು ಅಶಕ್ತನಾಗಿದ್ದು, 'ಪ್ರಾಯಶಃ ತಾವು ನನಗೆ ಹೇಳಿ ಕಳುಹಿಸಬಹುದೆಂದು ನಿರೀಕ್ಷಿಸುತ್ತಿದ್ದೆ' ಎಂಬ ಸುಳ್ಳು ನೆಪವನ್ನು ಹೇಳಿದನು. ಕೊನೆಗೆ ಪ್ರಯೋಗಶಾಲೆಯನ್ನು ಹೊಕ್ಕು, ತನ್ನ ನಡವಳಿಕೆಯ ವಿಚಾರದಲ್ಲಿ ತನಗೇ ಆಶ್ಚರ್ಯವೂ ನಾಚಿ ಕೆಯೂ ಆಗುತ್ತಿದ್ದರೂ ಕೂಡ ಮೂಲೆಯಲ್ಲಿದ್ದ ಕುರ್ಚಿಯ ನ್ನೆತ್ತಿ ಮೇಜಿನ ಮೇಲೆ ಇಟ್ಟನು. ಅನಂತರ ಸಮಾಧಾನ ವನ್ನು ಹೊಂದಿ ಯಾವುದೂ ಒಂದು ದೊಡ್ಡ ಹೊರೆಯನ್ನಿಳಿಸಿ ದಂತೆ ಸಮಾಧಾನದಿಂದ ಹೊರಡಲುದ್ಯುಕ್ತನಾದನು. ಆಗ ವಿಜ್ಞಾನಿಯು ತಾನು ಕೃತಕನಿದ್ರೆಯಲ್ಲಿ ಮಾಡಿದ್ದ ಸಲಹೆಯ ಪರಿಣಾಮವಾಗಿ ಆ ರೀತಿ ಅವನು ನಡೆದುಕೊಂಡನೆಂದು ಹೇಳಿದ ಮೇಲೆ ಪ್ರೇರಿತನಿಗೆ ತನ್ನ ನಡವಳಿಕೆಯ ವಿಚಾರದಲ್ಲಿದ್ದ ಆಶ್ಚರ್ಯವು ಮಾಯವಾಗಿ ಅದರ ರೀತಿ ಅರ್ಥವಾಯಿತು. ಮತ್ತೊಮ್ಮೆ ಇದೇ ರೀತಿಯಲ್ಲಿ ಕೃತಕ ನಿದ್ರೆಯಲ್ಲಿದ್ದ ಒಬ್ಬ ವ್ಯಕ್ತಿಗೆ ಪ್ರೇರಕನು ಈ ಕೆಳಕಂಡ ರೀತಿಯಲ್ಲಿ ಒಂದು ವಿಚಿತ್ರ ಸೂಚನೆಯನ್ನು ಮಾಡಿದನು. ಅವನು ನಿದ್ರೆಯಿಂದೆಚ್ಚೆತ್ತ ಮೇಲೆ ಒಂದು ನಿರ್ದಿಷ್ಟವಾದ ಸಮಯದಲ್ಲಿ ಅದೇ ಪ್ರಯೋಗ ಶಾಲೆಯಲ್ಲಿ ಹಾಜರಿರುವ ಮತ್ತೊಬ್ಬ ಮನುಷ್ಯನ ಜೇಬಿನಲ್ಲಿ

ರುವ ಕರವಸ್ತ್ರವನ್ನು ಹೊರಗೆಳೆದು ತೆಗೆದುಕೊಂಡು ಅದಕ್ಕೆ ಐದು ಗಂಟುಗಳನ್ನು ಹಾಕಿ ಮತ್ತೆ ಅದನ್ನು ಹಿಂದಕ್ಕೆ ಕೊಡಬೇಕೆಂದು ಸೂಚನೆಯಿತ್ತನು. ಪ್ರೇರಿತನು ಎಚ್ಚೆತ್ತ ಮೇಲೆ ತನಗೆ ಯಾವ ಸೂಚನೆ ಕೊಡಲಾಯಿತೆಂದು ಕೇಳಿದಾಗ ಅವನಿಗೆ ಸಂಪೂರ್ಣವಾಗಿ ಅದರ ಅರಿವಿಲ್ಲ ವೆಂದು ಒಪ್ಪಿಕೊಂಡನು. ಇದು ಕೃತಕನಿದ್ರಾನಂತರದ ವಿಸ್ಮೃತಿಯ ಪರಿಣಾಮ. ಆದರೂ ಹಿಂದಿನ ಸೂಚನೆಗನುಸಾರ ವಾಗಿ ಪ್ರೇರಿತನು ಹೇಳಿದ್ದ ಸಮಯಕ್ಕೆ ಸರಿಯಾಗಿ ಪ್ರಯೋಗ ಶಾಲೆಯಲ್ಲಿದ್ದ ಮೂರನೆಯ ವ್ಯಕ್ತಿಯ ಬಳಿಗೆ ಹೋಗಿ ತನಗೆ ಕೊಟ್ಟಿದ್ದ ಸೂಚನೆಯನ್ನು ಸ್ವಲ್ಪವೂ ಮೀರದೆ, ಆತನ ಕರ ವಸ್ತ್ರವನ್ನು ತೆಗೆದು ಐದು ಗಂಟುಗಳನ್ನು ಹಾಕಿ ಹಿಂದಕ್ಕೆ ಕೊಟ್ಟನು. 'ಏಕೆ ಹೀಗೆ ಮಾಡಿದೆ' ಎಂದು ಆತನನ್ನು ಕೇಳಿ ದಾಗ, ಪ್ರಾಯಶಃ ಆ ಮೂರನೆಯ ವ್ಯಕ್ತಿಯು ಯಾವುದೋ ಪ್ರಮುಖವಾದ ಕಾರ್ಯವನ್ನು ಮಾಡಬೇಕಾಗಿರಬಹುದೆಂದೂ, ಆತನು ಅದನ್ನು ಮರೆಯದಿರದಂತೆ ಮಾಡಲು ತಾನು ಹಾಗೆ ಕರವಸ್ತ್ರವನ್ನು ಗಂಟು ಹಾಕಿದುದಾಗಿಯೂ ಸುಳ್ಳು ನೆಪವನ್ನು ಹೇಳಿದನು.

ಮತ್ತೊಂದು ಬಹುಸ್ವಾರಸ್ಯವಾದ ಪ್ರಯೋಗವನ್ನು 'ವಿಲಿಯಂ ಮೆಕ್ ಡೂಗಲ್'ರು ನಡೆಸಿದರು. ಈ ಸಂದರ್ಭದಲ್ಲಿ ಪ್ರಯೋಗಕ್ಕೆ ವಿಷಯವಾಗಿದ್ದಾತ ಒಬ್ಬ ತತ್ವಜ್ಞಾನಿ. ಆತನಿಗೆ ಕೃತಕ ನಿದ್ರಾನಂತರದ ಪ್ರೇರಣೆಯ ವಿಚಾರದಲ್ಲಿ ಸ್ವಲ್ಪವೂ ನಂಬಿಕೆಯಿರಲಿಲ್ಲ. ಆದುದರಿಂದ ಅದರ ಸತ್ವವನ್ನು ಪರೀಕ್ಷಿಸಲು ತಾನೇ ಉದ್ದೇಶಪೂರ್ವಕವಾಗಿ ಹೀಗೆ ಪ್ರಯೋಗಕ್ಕೆ ಒಳಗಾ ದನು. ತನ್ನ ಇಚ್ಛಾಶಕ್ತಿಯಿಂದ ಎಂತಹ ಪ್ರೇರಣೆಯ ಪ್ರಬಲ

ಶಕ್ತಿಯನ್ನಾದರೂ ನಿರೋಧಿಸಬಲ್ಲನೆಂಬ ಆತ್ಮವಿಶ್ವಾಸ ಆತನಲ್ಲಿ ಪೂರ್ಣವಾಗಿತ್ತು. ಇಂತಹ ಸಂಶಯಾತ್ಮನಿಗೆ ಕೃತಕ ನಿದ್ರೆಯನ್ನು ಕಲ್ಪಿಸಲಾಯಿತು. ಅನಂತರ ಅವನಿಗೆ ತಾನು ಪ್ರಯೋಗಶಾಲೆಯನ್ನು ಬಿಟ್ಟು ಹೋಗುವುದಕ್ಕೆ ಮೊದಲು ದೂರದ ಒಂದು ಮೂಲೆಯಲ್ಲಿದ್ದ ಕುರ್ಚಿಯಲ್ಲಿ ಕುಳಿತು ಆಮೇಲೆ ಹೊರಕ್ಕೆ ಹೋಗಬೇಕೆಂದು ಸೂಚನೆಯನ್ನು ಕೊಡಲಾಯಿತು. ಸಾಧಾರಣವಾಗಿ ಇಂತಹ ಸಂದರ್ಭದಲ್ಲಿ ಎಲ್ಲ ಪ್ರೇರಿತರಲ್ಲಿಯೂ ಕಂಡುಬರುವ ವಿಸ್ಮೃತಿ ಈತನಲ್ಲಿರಲಿಲ್ಲ. ಈತನು ತನಗೆ ಕೃತಕನಿದ್ರೆಯಲ್ಲಿ ಕೊಡಲಾದ ಸಲಹೆಯನ್ನು ಸ್ಪಷ್ಟವಾಗಿ ನೆನೆಸಿಕೊಳ್ಳಬಲ್ಲವನಾಗಿದ್ದನು. ತನ್ನಲ್ಲಿ, ಮೂಲೆಯಲ್ಲಿರುವ ಕುರ್ಚಿಯಲ್ಲಿ ಕೂಡುವ ಪ್ರವೃತ್ತಿಯು ಪ್ರಬಲವಾಗಿದ್ದರೂ ಕೂಡ, ತಾನು ಹಾಗೆ ಮಾಡುವುದಿಲ್ಲವೆಂಬ ದೃಢ ಸಂಕಲ್ಪದಿಂದಿರುವುದಾಗಿ ತಿಳಿಸಿದನು. ಪ್ರೇರಕನು, ಆತನು ತನ್ನ ಇಚ್ಛೆ ಬಂದಂತೆ ಮಾಡಬಹುದು ಎಂದು ಅನುಮತಿ ಇತ್ತನು. ಈಗ ಅವನಿಗೆ ತನ್ನ ಮನೆಗೆ ಹಿಂತಿರುಗುವ ವೇಳೆಯಾಯಿತು. ಈ ಸಂದರ್ಭದಲ್ಲಿ ಹಿಂದು ಮುಂದು ನೋಡುತ್ತಾ ನಿಂತನು. ಅವನ ಮನಸ್ಸಿನಲ್ಲಿ ಒಂದು ವಿಧವಾದ ತೀವ್ರ ಘರ್ಷಣೆ ನಡೆಯುತ್ತಿರುವುದು ಸ್ಪಷ್ಟವಾಯಿತು. ತನ್ನಲ್ಲಿ ಆ ಕುರ್ಚಿಯಲ್ಲಿ ಕುಳಿತುಕೊಳ್ಳುವ ಆಸೆಯು ಪ್ರಬಲವಾಗುತ್ತಿದ್ದರೂ ಕೂಡ, ತನ್ನ ಸ್ವತಂತ್ರವಾದ ಇಚ್ಛೆಯಂತೆ ತಾನು ಅಂತಹ ಅವಿವೇಕದ ಕೆಲಸವನ್ನು ಮಾಡುವ ಮನೋದೌರ್ಬಲ್ಯಕ್ಕೆ ವಶವಾಗುವುದಿಲ್ಲವೆಂದು ಮತ್ತೆ ಹೇಳಿದನು. ಇಷ್ಟಾದ ಮೇಲೂ ಕೂಡ ಪ್ರಯೋಗಶಾಲೆಯನ್ನು ಬಿಟ್ಟು ಹೊರಕ್ಕೆ ಹೋಗದೆ ಅಲ್ಲಿಯೇ ಯಾವುದೋ ಕೆಲಸಕ್ಕೆ ಬಾರದ ಮಾತನ್ನು

ಆಡುತ್ತಾ ನಿಂತನು. ಕೊನೆಗೆ ತನ್ನ ಪ್ರಬಲವಾದ ಮನೋವೇಗವನ್ನು ತಡೆಯಲಾಗದೆ "ಪ್ರಾಯಶಃ ನಾನು ಕುರ್ಚಿಯಲ್ಲಿ ಕುಳಿತುಕೊಳ್ಳುವುದೇ ಒಳ್ಳೆಯದೆಂದು ಕಾಣುತ್ತದೆ. ಅದುವರೆಗೆ ನನ್ನ ಮನಸ್ಸಿಗೆ ಸಮಾಧಾನವಾಗುವುದಿಲ್ಲ" ಎಂದು ಹೇಳಿ ಕುರ್ಚಿಯಲ್ಲಿ ಕುಳಿತುಬಿಟ್ಟನು. ಈ ತನ್ನ ನಡವಳಿಕೆಯಿಂದ ತನಗೆ ಸ್ವಲ್ಪ ನಾಚಿಕೆಯಾಯಿತಾದರೂ ಮನಸ್ಸು ಬಹಳ ಹಗುರವಾಗಿ ಸಂತೋಷವಾಯಿತು ಎಂದು ಒಪ್ಪಿಕೊಂಡನು.

ಈ ಮೇಲಿನ ಉದಾಹರಣೆಗಳಿಂದ ಕೃತಕ ನಿದ್ರಾನಂತರದ ಪ್ರೇರಣೆಯ ವಿಚಾರದಲ್ಲಿ ಕೆಲವು ವಿಷಯಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ ಕೃತಕ ನಿದ್ರೆಯಲ್ಲಿ ಮಾಡುವ ಸಲಹೆ ಒಳಮನಸ್ಸಿಗೆ. ಎರಡನೆಯದಾಗಿ ಒಳಮನಸ್ಸಿಗೂ ಹೊರಮನಸ್ಸಿಗೂ ಅನೇಕ ವೇಳೆ ಘರ್ಷಣೆಯುಂಟಾಗುತ್ತದೆ. ಮೂರನೆಯದಾಗಿ ಒಮ್ಮೆ ಒಳಮನಸ್ಸಿಗೆ ಮಾಡಿದ ಪ್ರೇರಣೆ ಕಾರ್ಯರೂಪಕ್ಕೆ ಬರುವವರೆಗೂ ಅದು ಸಂತತವಾದ ಪ್ರಯತ್ನವನ್ನು ನಡೆಸುತ್ತಲೇ ಇದ್ದು, ಒಬ್ಬ ವ್ಯಕ್ತಿಯಲ್ಲಿ ಒಂದು ಘರ್ಷಣೆಯನ್ನುಂಟುಮಾಡುತ್ತದೆ.

ನಿತ್ಯಜೀವನದಲ್ಲಿ ಪ್ರೇರಣೆ.

ಇದುವರೆಗೂ ನಾವು ಪರಿಶೀಲಿಸಿದ ವಿವಿಧ ರೀತಿಯ ಪ್ರೇರಣೆಗಳ ವಿಮರ್ಶೆಯಿಂದ ಪ್ರೇರಣೆಯ ಸ್ವರೂಪ ಮತ್ತು ಲಕ್ಷಣಗಳನ್ನು ಈ ರೀತಿ ಹೇಳಬಹುದು. ಪ್ರೇರಣೆ ಎಂದರೆ ಒಬ್ಬ ವ್ಯಕ್ತಿ ಅಥವಾ ವಸ್ತು ಅಥವಾ ಸನ್ನಿವೇಶವು ಮತ್ತೊಬ್ಬ ವ್ಯಕ್ತಿಯಲ್ಲಿ ಅಗೋಚರವಾಗಿ ಕಲ್ಪಿಸುವ ಒಂದು ನಂಬಿಕೆ ಅಥವಾ ಪ್ರವೃತ್ತಿ. ಇಂತಹ ಪ್ರೇರಣೆ ಕೃತಕ ನಿದ್ರೆಯಂತಹ

ವಿಶೇಷ ಸನ್ನಿವೇಶಗಳಲ್ಲಿ ಮಾತ್ರವಲ್ಲದೆ ನಿತ್ಯಜೀವನದಲ್ಲಿಯೂ ಕೂಡ ಪ್ರತಿದಿನವೂ ನಮ್ಮೆಲ್ಲರಿಗೂ ನಾನಾರೂಪದಲ್ಲಿ ಉಂಟಾಗುತ್ತದೆ. ಇವುಗಳಲ್ಲಿ ಮುಖ್ಯವಾಗಿ ಮೂರು ವಿಧವೆಂದು ಹೇಳಬಹುದು. ಇವು ಯಾವುವೆಂದರೆ (೧) ವಸ್ತುಗಳಿಂದ ಬರುವ ಪ್ರೇರಣೆ. (೨) ಸನ್ನಿವೇಶಗಳಿಂದ ಆಗುವ ಪ್ರೇರಣೆ. (೩) ವ್ಯಕ್ತಿಗಳಿಂದ ಆಗುವ ಪ್ರೇರಣೆ. ವಸ್ತುಗಳು ನಿರ್ಜೀವ ವಾಗಿದ್ದರೂ ಕೂಡ ಅಂತಹವುಗಳಿಂದಲೂ ಅನೇಕ ವೇಳೆ ಬಹಳ ಪ್ರಬಲವಾದ ಮತ್ತು ಪರಿಣಾಮಕಾರಿಯಾದ ಪ್ರೇರಣೆಯು ನಮ್ಮ ಮನಸ್ಸಿನಲ್ಲಿ ಆಗಬಹುದು. ಉದಾಹರಣೆಗಾಗಿ ಈ ಕೆಳಗಿನ ಪ್ರಯೋಗವನ್ನು ಹೇಳಬಹುದು. ಒಂದು ಮೇಜಿನ ಮೇಲೆ ಬೇರೆ ಬೇರೆ ಗಾತ್ರದ ಆದರೆ ಒಂದೇ ಆಕಾರದ ಮೂರು ತೂಕದ ಬಟ್ಟುಗಳಿವೆ. ಇವುಗಳಲ್ಲಿ ಒಂದು ಕಾಲು ಮಣದ ಬಟ್ಟಿನ ಗಾತ್ರದ್ದು. ಎರಡನೆಯದು ಒಂದು ವೀಸೆಯ ಗಾತ್ರದ್ದು. ಮೂರನೆಯದು ೧/೨ ವೀಸೆಯ ಗಾತ್ರದ್ದು. ಇವುಗಳಲ್ಲಿ ಬಹು ದೊಡ್ಡದಾದ ಕಾಲು ಮಣದ ಬಟ್ಟು ನಿಜವಾದ ಬಟ್ಟಲ್ಲ. ಅದು ಬಹಳ ಹಗುರವಾದ ಮರದಿಂದ ಮಾಡಲ್ಪಟ್ಟದ್ದು. ಒಳಗಡೆ ಟೊಳ್ಳಾಗಿರುತ್ತದೆ. ಆದರೆ ಮೂರಕ್ಕೂ ಒಂದೇ ಬಗೆಯ ಬಣ್ಣ ಮತ್ತು ಆಕಾರವಿರುವುದ ರಿಂದ ಅವೆಲ್ಲವೂ ನಿಜವಾದ ಬಟ್ಟುಗಳೆಂದು ನಮ್ಮ ಮನಸ್ಸಿಗೆ ಕಲ್ಪನೆ ಉಂಟಾಗುತ್ತದೆ. ಇದು ಒಂದು ಬಾಹ್ಯವಸ್ತುವಿನ ಬಣ್ಣ ಮತ್ತು ಆಕಾರದಿಂದ ನಮ್ಮ ಮನಸ್ಸಿನಲ್ಲಿ ಆಗುವ ತಪ್ಪು ಪ್ರೇರಣೆ. ಇದರ ಫಲವಾಗಿ ನಾವು ಅದನ್ನು ಎತ್ತಲು ಹೋದಾಗ ನಿಜವಾಗಿಯು ಅದನ್ನು ಎತ್ತಲು ಬೇಕಾಗುವ ಶಕ್ತಿಗಿಂತಲೂ ಹೆಚ್ಚು ಶಕ್ತಿಯನ್ನು ವಿನಿಯೋಗಿಸಿ ಎತ್ತುತ್ತೇವೆ.

ಕೂಡಲೆ ಅದು ಬಹಳ ವೇಗದಿಂದ ಮೇಲಕ್ಕೆ ಬಂದು ಮುಖಕ್ಕೆ ಬಡಿದುಕೊಳ್ಳುವಂತೆ ಆಗುತ್ತದೆ. ಇದರಿಂದ ನಮಗಾದ ತಪ್ಪು ಪ್ರೇರಣೆಯ ಪರಿಣಾಮವನ್ನು ತಿಳಿಯುತ್ತೇವೆ. ಈಗ ಅತ್ಯಂತ ಚಿಕ್ಕದಾದ ೧/೨ ವೀಸೆಯ ಬಟ್ಟನ್ನು ಎತ್ತಲು ಪ್ರಯತ್ನಿಸುತ್ತೇವೆ. ಹೀಗೆ ಮಾಡುವಾಗ ಹಿಂದಿನ ಅನುಭವವು ನಮಗೆ ಮತ್ತೆ ಒಂದು ತಪ್ಪು ಪ್ರೇರಣೆಯನ್ನುಂಟುಮಾಡುತ್ತದೆ. ಹಿಂದೆ ಎತ್ತಿದ ಅಷ್ಟು ದೊಡ್ಡ ಪದಾರ್ಥವೇ ಅಷ್ಟು ಲಘುವಾಗಿರುವಾಗ, ಇದು ಇನ್ನೂ ಬಹಳ ಲಘುವಾದುದೆಂದು ತಪ್ಪು ನಿರ್ಣಯವನ್ನು ಮಾಡುತ್ತೇವೆ. ಇದರ ಪರಿಣಾಮವಾಗಿ ಇದನೆತ್ತುವಾಗ ವಾಸ್ತವವಾಗಿ ಬೇಕಾಗುವ ಶಕ್ತಿಗಿಂತಲೂ ಬಹಳ ಕಡಿಮೆ ಶಕ್ತಿಯನ್ನು ವಿನಿಯೋಗಿಸಿ ಅದನೆತ್ತಲು ಉದ್ಯುಕ್ತರಾಗುತ್ತೇವೆ. ಆಗ ಒಂದು ವಿಚಿತ್ರ ಅನುಭವವಾಗುತ್ತದೆ. ಅಷ್ಟು ಚಿಕ್ಕದಾದ ಬಟ್ಟನ್ನು ಕದಲಿಸುವುದಕ್ಕಾಗದೆ ಅದು ಮೇಜಿಗೆ ಮಳೆ ಬಡಿದು ಸೇರಿಸಿರುವಂತೆ ಭಾಸವಾಗುತ್ತದೆ. ಕೊನೆಗೆ ಮೂರನೆಯ ಬಟ್ಟನ್ನು ಎತ್ತುವುದಕ್ಕೆ ಹೋಗುವಾಗ ಇಂತಹ ಯಾವ ಒಂದು ಪ್ರೇರಣೆಗೂ ಒಳಗಾಗದೆ ಎಚ್ಚರದಿಂದಿರುವುದಕ್ಕೆ ಪ್ರಯತ್ನಿಸುತ್ತೇವೆ. ಅವನ್ನು ಎತ್ತುವುದಕ್ಕೆ ಮೊದಲು ಸ್ವಲ್ಪ ಕದಲಿಸಿ ನೋಡಿ ಅವರ ತೂಕವೆಷ್ಟಿರಬಹುದೆಂದು ನಿರ್ಧರಿಸಿ, ಅನಂತರ ಅದಕ್ಕೆ ಬೇಕಾಗುವಷ್ಟು ಶಕ್ತಿಯನ್ನು ವಿನಿಯೋಗಿಸಿ ಅದನ್ನು ಎತ್ತುತ್ತೇವೆ. ಹೀಗೆ ಬಟ್ಟುಗಳನ್ನು ಎತ್ತಬೇಕಾಗುವ ಪ್ರಸಂಗಗಳು ನಿತ್ಯ ಜೀವನದಲ್ಲಿ ಬರುವುದಿಲ್ಲವೆಂದು ನಿಜ. ಆದರೆ ಇದರಂತಹ ಸನ್ನಿವೇಶಗಳು ಪ್ರತಿದಿನ ಇರುತ್ತವೆ. ಬಟ್ಟುಗಳಲ್ಲದೇ ಹೋದರೂ ನಾವು ವ್ಯವಹರಿಸುವ ಜನರಲ್ಲಿ ಕೆಲವರು ತಾವು ದೊಡ್ಡವರಾಗಿ

ಕಂಡರೂ ನಿಶ್ಚಯವಾಗಿ ಟೊಳ್ಳು ಮನುಷ್ಯರಾಗಿರುತ್ತಾರೆ. ಅವರ ಬಾಹ್ಯ ವೇಷಭೂಷಣಗಳು ನಮ್ಮಲ್ಲಿ ತಪ್ಪು ಪ್ರೇರಣೆಯನ್ನುಂಟುಮಾಡಬಹುದು. ಹಾಗೆಯೇ ಅತ್ಯಲ್ಪರೆಂದು ಕಂಡುಬರುವ ಕೆಲವು ವ್ಯಕ್ತಿಗಳ ವಿಚಾರದಲ್ಲಿ ನಾವು ಉದಾಸೀನವನ್ನು ವಹಿಸುತ್ತೇವೆ. ಇದು ಬಾಹ್ಯ ವಸ್ತುಗಳ ಪ್ರೇರಣೆಯ ಫಲ. ಆದುದರಿಂದ ಒಬ್ಬ ವ್ಯಕ್ತಿಗೆ ಪುರಸ್ಕಾರ ಅಥವಾ ತಿರಸ್ಕಾರವನ್ನು ಕೊಡುವುದಕ್ಕೆ ಮೊದಲು ಯಾವ ಬಾಹ್ಯಪ್ರೇರಣೆಗೂ ಒಳಗಾಗದೆ, ನಿಷ್ಪಕ್ಷಪಾತ ದೃಷ್ಟಿಯಿಂದ ಅವನ ಯೋಗ್ಯತೆಯನ್ನು ಕಂಡುಹಿಡಿದುಕೊಳ್ಳಬೇಕೆಂಬ ಪಾಠವನ್ನು, ಮೇಲಿನ ಪ್ರಯೋಗದಿಂದ ಕಲಿತುಕೊಂಡಂತೆ ಆಗುತ್ತದೆ. ಹೀಗೆಯೇ ವ್ಯಕ್ತಿಗಳ ವಿಚಾರದಲ್ಲಿ ಮಾತ್ರವಲ್ಲದೆ ಈಗ ನಮ್ಮನ್ನು ಸುತ್ತುಗಟ್ಟಿರುವ ಆರ್ಥಿಕ ಮತ್ತು ರಾಜಕೀಯ ತತ್ವಗಳ ವಿಚಾರದಲ್ಲಿಯೂ ಇಂತಹ ತಪ್ಪುಪ್ರೇರಣೆಗೆ ಬಹಳ ಅವಕಾಶವಿರುವುದರಿಂದ ಅವುಗಳ ವಿಚಾರದಲ್ಲಿಯೂ ಬಹಳ ಎಚ್ಚರದಿಂದಿರುವುದು ಅತ್ಯಾವಶ್ಯಕ. ಈ ಬಗೆಯಾಗಿ ಅಚೇತನವಾದ ವಸ್ತುಗಳಿಂದುಂಟಾಗುವ ಪ್ರೇರಣೆಯಲ್ಲದೆ ಅನೇಕ ವೇಳೆ ಕೆಲವು ಜನರಿಂದಲೂ ಇದೇ ಬಗೆಯ ತಪ್ಪು ಪ್ರೇರಣೆಗಳು ಉಂಟಾಗಬಹುದು. ಇವುಗಳಲ್ಲಿ ಕೆಲವು ಅಜ್ಞಾತವಾಗಿ ಉಂಟಾಗುವ ಪ್ರೇರಣೆಗಳು. ಉಳಿದವು ಕೆಲವು ಸ್ವಾರ್ಥಿಗಳು ಕಾರ್ಯಸಾಧನೆಗಾಗಿ ಉದ್ದೇಶ ಪೂರ್ವಕವಾಗಿ ಜನಸಾಮಾನ್ಯರಲ್ಲಿ ಕಲ್ಪಿಸುವ ತಪ್ಪುಪ್ರೇರಣೆಗಳು. ಇಂತಹವುಗಳ ವಿಚಾರದಲ್ಲಿ ನಾವು ಎಷ್ಟು ಎಚ್ಚರದಿಂದಿದ್ದರೂ ಸಾಲದು. ಆಧುನಿಕ ಯುಗವನ್ನು ಸಾಧಾರಣವಾಗಿ ವಿಜ್ಞಾನಯುಗವೆಂದು ಬಹಳ ಹೆಮ್ಮೆಯಿಂದ ನಾವು ಹೇಳಿಕೊಳ್ಳುವುದುಂಟು.

ಆದರೂ ನಮ್ಮಲ್ಲಿ ನಿಜವಾದ ವೈಜ್ಞಾನಿಕ ದೃಷ್ಟಿಯುಳ್ಳವರು ಅತಿ ವಿರಳವೆಂದು ಹೇಳಿದರೆ ತಪ್ಪಾಗಲಾರದು. ವೈಜ್ಞಾನಿಕ ಮನೋಧರ್ಮಕ್ಕೆ ಇರಬೇಕಾದ ನಿಷ್ಪಕ್ಷಪಾತ ದೃಷ್ಟಿಯನ್ನು ಬೆಳೆಸಿಕೊಂಡಿರುವವರ ಸಂಖ್ಯೆ ಬಹಳ ಕಡಿಮೆ. ಹೀಗಿರುವಲ್ಲಿ ಜನ ಸಾಮಾನ್ಯರ ವಿಚಾರಶಕ್ತಿಯು ಬಹಳ ಅಲ್ಪವಾದುದು. ಇದಕ್ಕೂ ಅನೇಕ ಬಗೆಯಾದ ಪ್ರಬಲ ಶತ್ರುಗಳಿವೆ. ಆಧುನಿಕ ಯುಗದಲ್ಲಿ ಬಹಳ ಪ್ರಬಲಿಸಿರುವ ಪ್ರಚಾರ ತಂತ್ರಗಳೇ ಈ ಶತ್ರುಗಳು. ರಾಜಕೀಯದಿಂದ ಮೊದಲುಗೊಂಡು ಮತಧರ್ಮದವರೆಗೂ ಎಲ್ಲದರಲ್ಲಿಯೂ ಒಂದು ಬಗೆಯಾದ, ಯುಕ್ತಿಗೆ ದೂರವಾದ ಪ್ರಚಾರ ತಂತ್ರವನ್ನು ಉಪಯೋಗಿಸುತ್ತಾ ಬಂದಿದ್ದಾರೆ. ಜನರ ಮನಸ್ಸುಗಳನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಅವರು ಹೂಡುವ ವಿಶೇಷ ತಂತ್ರಗಳಿವು. ಈ ಕಾರಣದಿಂದ ಆಧುನಿಕ ಯುಗವನ್ನು ವಿಜ್ಞಾನ ಯುಗವೆನ್ನುವುದಕ್ಕಿಂತಲೂ ಪ್ರಚಾರಯುಗವೆನ್ನಬಹುದು ಹೆಚ್ಚು ಉಚಿತವೆನಿಸುತ್ತದೆ. ಈ ಎಲ್ಲ ತಂತ್ರಗಳಿಂದಲೂ ಕೆಲವು ಸ್ವಾರ್ಥಿಗಳು ತಪ್ಪು ಅಭಿಪ್ರಾಯಗಳನ್ನು ಜನರ ಮನಸ್ಸಿನಲ್ಲಿ ಪ್ರೇರಿಸಲು ಯತ್ನಿಸುತ್ತಾರೆ. ಇಂತಹ ಪ್ರೇರಣೆ ಬಹುಬೇಗ ಯಶಸ್ವಿಯಾಗುತ್ತವೆ. ಇದಕ್ಕೆ ಒಂದು ಪ್ರಬಲವಾದ ಕಾರಣವೂ ಉಂಟು. ವ್ಯಕ್ತಿಶಃ ಪ್ರತಿಯೊಬ್ಬ ಮನುಷ್ಯನು ವಿವೇಚನಾಪರನಾಗಿದ್ದರೂ ಸಮುದಾಯದಲ್ಲಿ ಸೇರಿದಾಗ ಅವನ ವಿಚಾರಪರತೆ ಶೂನ್ಯವಾಗುತ್ತದೆ ಅಥವಾ ಬಹಳ ಕೆಳಮಟ್ಟಕ್ಕೆ ಇಳಿಯುತ್ತದೆ. ಆದುದರಿಂದ ಜನ ಸಮುದಾಯ ಅಥವಾ ಗುಂಪು ಬಹುಬೇಗ ಎಷ್ಟೇ ವಿವೇಕರಹಿತವಾದ ಪ್ರೇರಣೆಯಾದರೂ ಅದಕ್ಕೆ ಬಲಿಬೀಳುತ್ತದೆ.

ಇಂತಹ ಪ್ರೇರಣಾ ತಂತ್ರಗಳು ಸಾಮಾನ್ಯವಾಗಿ ಮೂರು ಬಗೆ. (೧) ಪುನಶ್ಚರಣೆ:—ಯಾವುದಾದರು ಒಂದು ಅಭಿಪ್ರಾಯವನ್ನು ಬಾರಿ ಬಾರಿಗೂ ಜನರೆದುರಿಗೆ ಹೇಳುತ್ತಿದ್ದರೆ ಕ್ರಮೇಣ ಅದರಲ್ಲಿ ಜನರಿಗೆ ವಿಶ್ವಾಸಹುಟ್ಟಿ ಕೊನೆಗೆ ಅದು ಸರಿಯೆಂದು ಒಪ್ಪಿಕೊಳ್ಳುತ್ತಾರೆ. ಇದನ್ನು ನಾವು ನಿತ್ಯ ಜೀವನದಲ್ಲಿ ಸದಾ ನಡೆಯುತ್ತಿರುವ ಜಾಹಿರಾತುಗಳ ವಿಷಯದಲ್ಲಿ ಸ್ಪಷ್ಟಪಡಿಸಬಹುದು. ಯಾವುದೋ ಒಂದು ಔಷಧಿ ಅಥವಾ ಅಲಂಕಾರ ವಸ್ತುವನ್ನು ಬೇರೆ ಬೇರೆ ಕಡೆಯಲ್ಲಿ ಬಹುರೂಪದಲ್ಲಿ ಹೊಗಳುತ್ತಿದ್ದರೆ ಕೊನೆಗೆ ಅದು ಯಥಾರ್ಥವಾಗಿ ಅಮೂಲ್ಯ ವಸ್ತುವೆಂದು ಜನರು ನಂಬಿ ಮೋಸ ಹೋಗುತ್ತಾರೆ. ಬಾರಿ ಬಾರಿಗೂ ಒಂದು ಅಭಿಪ್ರಾಯವನ್ನು ಹೇಳುವುದರಿಂದ ಮನಸ್ಸಿನಲ್ಲಿ ಅದರ ವಿಷಯದಲ್ಲಿ ಹೇಗೆ ವಿಶ್ವಾಸ ಹುಟ್ಟುವುದೆಂಬುದನ್ನು ತೋರಿಸುವುದಕ್ಕೆ ಹೇಳುವ ಕತೆಯೊಂದಿದೆ. ಒಬ್ಬ ಬ್ರಾಹ್ಮಣನು ಯಜ್ಞಪಶುವಿಗಾಗಿ ಒಂದು ಮೇಕೆಯನ್ನು ಕರೆದೊಯ್ಯುತ್ತಿದ್ದನು. ಮೂವರು ಧೂರ್ತರು ಆ ಮೇಕೆಯನ್ನು ಅವನಿಂದ ಉಪಾಯದಿಂದ ಕಸಿದುಕೊಳ್ಳಬೇಕೆಂದು ಯೋಚಿಸಿದರು. ಈ ಉದ್ದೇಶದಿಂದ ಅವರಲ್ಲೊಬ್ಬನು ಆ ಬ್ರಾಹ್ಮಣನನ್ನು ಹಿಂಬಾಲಿಸಿ "ಬ್ರಾಹ್ಮಣನಾದ ನೀನು ನಾಯಿಯನ್ನು ಏಕೆ ಕರೆದುಕೊಂಡು ಹೋಗುತ್ತಿರುವೆ" ಎಂದು ಕೇಳಿದನು. ಆದರೆ ಆ ಬ್ರಾಹ್ಮಣನು ಅವನ ಮಾತನ್ನು ನಂಬದೆ ಮುಂದಕ್ಕೆ ಹೋದನು. ಸ್ವಲ್ಪ ದೂರ ಹೋದ ಮೇಲೆ ಮತ್ತೊಬ್ಬ ಧೂರ್ತನು ಅವನನ್ನು ಇದಿರುಗೊಂಡು ಮತ್ತೆ ಅದೇ ಪ್ರಶ್ನೆಯನ್ನು ಕೇಳಿದನು. ಈಗ ಬ್ರಾಹ್ಮಣನಿಗೆ ತಾನು ಕೊಂಡೊಯ್ಯುತ್ತಿರುವ ಆ ಪ್ರಾಣಿಯ ವಿಚಾರದಲ್ಲಿ ಸ್ವಲ್ಪ ಸಂಶಯ ಬಂದಿತಾದರೂ, ಅವರ ಮಾತನ್ನು

ಪ್ರಮಾಣವಾಗಿ ಸ್ವೀಕರಿಸದೆ ಮುಂದುವರಿದನು. ಇನ್ನೂ ಸ್ವಲ್ಪ ದೂರ ಹೋದಮೇಲೆ ಮೂರನೆಯ ಧೂರ್ತನು ಆ ಬ್ರಾಹ್ಮಣನನ್ನು ಸಂಧಿಸಿ ಮತ್ತೆ "ನಾಯಿಯನ್ನು ಏಕೆ ಕೊಂಡು ಹೋಗುತ್ತಿರುವೆ?" ಎಂದು ಕೇಳಿದನು. ಈಗ ಆ ಬ್ರಾಹ್ಮಣನಿಗೆ ಅದು ನಾಯಿಯೇ ಇರಬೇಕೆಂದೂ, ಇಲ್ಲದ್ದಿದ್ದಲ್ಲಿ ಮೂರು ಜನರೂ ಒಂದೇ ರೀತಿಯಲ್ಲಿ ಅದನ್ನು ನಾಯಿಯೆಂದು ಹೇಳುತ್ತಿರಲಿಲ್ಲವೆಂದು ನಂಬಿಕೆಯಾಯಿತು. ಆದುದರಿಂದ ತನ್ನ ಬಳಿಯಿದ್ದ ಮೇಕೆಯನ್ನು ಬಿಟ್ಟುಬಿಟ್ಟು ಯಜ್ಞ ಪಶುವಿಗಾಗಿ ಬೇರೆ ಮೇಕೆಯನ್ನು ಅರಸುತ್ತಾ ಹೋದನು.

ಹೀಗೆ ಬಾರಿ ಬಾರಿಗೂ ಒಂದೇ ಅಭಿಪ್ರಾಯವನ್ನು ಹೇಳುತ್ತಿರುವುದರಿಂದ ಜನರಲ್ಲಿ ಅದರ ಬಗ್ಗೆ ನಂಬಿಕೆಯುಂಟಾಗುವಂತೆ ಮಾಡುವುದು ಒಂದು ಬಗೆಯ ಪ್ರೇರಣೆಯ ತಂತ್ರವಾದರೆ, ಯಥಾರ್ಥವಲ್ಲದ ಒಂದು ವಿಷಯವನ್ನು ಬಹಳ ದೃಢವಾದ ವಿಶ್ವಾಸದಿಂದ,ಅಧಿಕಾರ ವಾಣಿಯಲ್ಲಿ ಹೇಳುವುದು ಮತ್ತೊಂದು ಬಗೆ. ಈ ವಿಧದಿಂದ ಜನರಿಗೆ ಬಹುಬೇಗ ನಂಬಿಕೆ ಹುಟ್ಟಿ ಅದು ನಿಜವೆಂದೇ ಗ್ರಹಿಸುತ್ತಾರೆ.

ಮೂರನೆಯದಾಗಿ ಯಾವುದೊ ಒಂದು ಕ್ಷೇತ್ರದಲ್ಲಿ ಬಹಳ ಹೆಸರುಗಳಿಸಿರುವ ವ್ಯಕ್ತಿಯ ಅಥವಾ ವ್ಯಕ್ತಿಗಳ ಹೆಸರನ್ನು ಉಪಯೋಗಿಸಿಕೊಂಡು ಒಂದು ಅಭಿಪ್ರಾಯದ ಅಥವಾ ಪದಾರ್ಥದ ಹಿರಿಮೆಯನ್ನು ಸ್ಥಾಪಿಸಲು ಯತ್ನಿಸುವರು.

ಈ ಬಗೆಯ ಪ್ರೇರಣೆಯಿಂದ ಕೂಡಿದ ಪ್ರಚಾರ ಕ್ರಮವು ಈಗಿನ ಕಾಲದ ಜಾಹೀರಾತುಗಳಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಒಬ್ಬ ಪ್ರಸಿದ್ಧ ವಿಜ್ಞಾನಿಯ, ಕವಿಯ ಅಥವಾ ಸಿನಿಮಾ ತಾರೆಯ ಹೆಸರನ್ನು ಹೇಳಿ ಅವರ ಮೆಚ್ಚಿಗೆ ಪಡೆದಿದೆಯೆಂದು

ಒಂದು ಬಗೆಯ ಹಲ್ಲುಪುಡಿ ಅಥವಾ ಸಾಬೂನಿನ ಪ್ರಚಾರವನ್ನು ಮಾಡುವುದು ನಾವು ಪ್ರತಿನಿತ್ಯವೂ ವರ್ತಮಾನ ಪತ್ರಿಕೆಗಳಲ್ಲಿ ನೋಡುತ್ತಿರುವ ವಿಷಯ. ಈ ಸಂದರ್ಭದಲ್ಲಿ ಹಿಂದೆ ನಮ್ಮ ದೇಶದ ಪ್ರಖ್ಯಾತ ದೈನಂದಿನ ಪತ್ರಿಕೆಯೊಂದರಲ್ಲಿ ಬಂದಿದ್ದ ಜಾಹೀರಾತೊಂದು ನೆನಪಿಗೆ ಬರುತ್ತದೆ. ಆ ಜಾಹೀರಾತಿನ ವಿವರ ಹೀಗಿತ್ತು. ಪ್ರಸಿದ್ಧ ಇಂಗ್ಲಿಷ್ ಕವಿ ಮಿಲ್‌ಟನ್‌ನ ಚಿತ್ರ ಒಂದು ಕಡೆ. ಅದರ ಪಕ್ಕದಲ್ಲಿ ಸ್ಯಾಂಸನ್‌ನ ಚಿತ್ರ. ಇವೆರಡರ ಕೆಳಗಡೆ "ಮಿಲ್‌ಟನ್‌ನು ಸ್ಯಾಂಸನ್‌ನನ್ನು ಕುರಿತು ಅದ್ಭುತವಾದ ಕಾವ್ಯವನ್ನು ಬರೆದಿದ್ದಾನೆ; ಸ್ಯಾಂಸನ್‌ನ ಹಿರಿಮೆ ಅವನ ಕೂದಲಿನಲ್ಲಿದ್ದ ಅಪಾರವಾದ ಶಕ್ತಿ. ಆದುದ ರಿಂದ ಒಳ್ಳೆಯ ಕೂದಲನ್ನು ಬೆಳೆಸಿಕೊಳ್ಳಿರಿ. ಹಾಗೆ ಕೂದ ಲನ್ನು ಬೆಳೆಸಿಕೊಳ್ಳಲು ನಮ್ಮ ಕೇಶತೈಲವನ್ನೇ ಉಪಯೋ ಗಿಸಿ" ಎಂದು ಬರೆದಿತ್ತು. ಇಂತಹ ಜಾಹೀರಾತುಗಳಲ್ಲಿ ಇರತಕ್ಕ ವಿಚಾರಸರಣಿ, ತರ್ಕಬದ್ಧತೆ, ಸ್ವಯಂ ವೇದ್ಯ ವಾಗಿಯೇ ಇದೆ. ಮಿಲ್‌ಟನ್ ಕವಿಗೂ, ಸ್ಯಾಂಸನ್‌ನಿಗೂ ಜಾಹೀರಾತು ಮಾಡಲಾಗಿರುವ ಕೇಶತೈಲಕ್ಕೂ ಯಾವ ಸಂಬಂಧವಿದೆ ಎಂಬುದನ್ನು ಯಾರಾದರೂ ಊಹಿಸಿಕೊಳ್ಳ ಬಹುದು. ಆದರೂ ಅನೇಕವೇಳೆ ಜನಸಾಮಾನ್ಯರು ಇಂತಹ ತಂತ್ರಕ್ಕೆ ಸಿಕ್ಕಿಬಿದ್ದು ಮೋಸ ಹೋಗುವುದು ಸಾಧಾರಣ. ಪ್ರಖ್ಯಾತರ ಹೆಸರನ್ನು ಹೇಳಿ ಜನರನ್ನು ಆ ನೆಪದಲ್ಲಿ ಮೋಸ ಗೊಳಿಸುವುದು ಬಹು ಸುಲಭ.

ಸ್ವಯಂಪ್ರೇರಣೆ.

ಒಬ್ಬ ವ್ಯಕ್ತಿ ಇನ್ನೊಬ್ಬನಲ್ಲಿ ಸಾಧಾರಣವಾಗಿಯಾಗಲಿ, ಕೃತಕನಿದ್ರೆಯ ಮೂಲಕವಾಗಲಿ, ಯಾವ ರೀತಿಗಳಲ್ಲಿ

ಪ್ರೇರಣೆಯನ್ನು ಮಾಡಬಹುದು ಎಂಬುದನ್ನು ಇದುವರೆಗೂ ನೋಡಿದ್ದೇವೆ. ಒಬ್ಬರು ಇನ್ನೊಬ್ಬರಲ್ಲಿ ಪ್ರೇರಣೆಯನ್ನುಂಟು ಮಾಡುವಂತೆ ತಮ್ಮಲ್ಲಿ ತಾವೇ ಪ್ರೇರಣೆಯನ್ನು ಕಲ್ಪಿಸ ಬಹುದು. ಇದಕ್ಕೆ ಸ್ವಯಂಪ್ರೇರಣೆ ಎಂದು ಹೆಸರು. ಈ ಸ್ವಯಂಪ್ರೇರಣೆಯ ವಿಚಾರದಲ್ಲಿ ಮನಶ್ಶಾಸ್ತ್ರಜ್ಞರಲ್ಲಿ ತೀರ ಭಿನ್ನವಾದ ಅಭಿಪ್ರಾಯಗಳಿವೆ. ಇದನ್ನು ಬಹಳವಾಗಿ ಪರೀಕ್ಷಿಸಿ ಪ್ರಯೋಗಗಳನ್ನು ನಡೆಸಿ ಯಶಸ್ಸನ್ನು ಗಳಿಸಿರುವ ಕೆಲವು ಮನೋವಿಜ್ಞಾನಿಗಳೂ ಇದ್ದಾರೆ. ಇವರಲ್ಲಿ ಫ್ರಾನ್ಸಿನ 'ನ್ಯಾನ್ಸಿ' ಎಂಬಲ್ಲಿ ವಾಸಿಸುತ್ತಿದ್ದ 'ಎಮಿಲ್-ಕೂ-ಎ' ಎಂಬುವನು ಬಹಳ ಪ್ರಖ್ಯಾತನಾದವನು. ಈತನ ಹೆಸರಿಗೂ ಸ್ವಯಂಪ್ರೇರಣೆಗೂ ಅತ್ಯಂತ ನಿಕಟವಾದ ಸಂಬಂಧವು ಶಾಶ್ವತವಾಗಿ ಏರ್ಪಟ್ಟಿದೆ. ಈತನಲ್ಲದೆ ಬಡೌನ್ ಎಂಬ ಮತ್ತೊಬ್ಬ ಮನೋವಿಜ್ಞಾನಿಯು ಇದನ್ನು ಬಹಳವಾಗಿ ಅಭ್ಯಸಿಸಿ, ಪ್ರಯೋಗಿಸಿ ಯಶಸ್ವಿಯಾಗಿದ್ದಾನೆ. ಇದರಲ್ಲಿ ಮುಖ್ಯವಾದ ವಿಷಯವೇನೆಂದರೆ ಒಬ್ಬ ವ್ಯಕ್ತಿಯು ತನಗೆ ತಾನೇ ಒಂದು ಅಭಿಪ್ರಾಯವನ್ನಾಗಲಿ, ಪ್ರವೃತ್ತಿಯನ್ನಾಗಲಿ ಪ್ರೇರಿಸಿಕೊಳ್ಳುತ್ತಾನೆ. ಈ ಪ್ರೇರಣೆಯ ಫಲವಾಗಿ ಅವನಲ್ಲಿ ಕೆಲವು ಬದಲಾವಣೆಗಳು ಕಂಡುಬರುತ್ತವೆ. ಎಮಿಲಿ-ಕೂ-ಎ ತಾನು ಈ ಕ್ಷೇತ್ರದಲ್ಲಿ ಸಾಧಿಸಿರುವ ಕೆಲವು ಅಸಾಧಾರಣ ಪ್ರಯೋಗಗಳನ್ನು ಹೇಳಿದ್ದಾನೆ. ತನ್ನ ಬಳಿಗೆ ಚಿಕಿತ್ಸೆಗಾಗಿ ಬಂದ ಕೆಲವು ರೋಗಿಗಳಿಗೆ ತಾನು ಈ ಸ್ವಯಂಪ್ರೇರಣೆಯ ಚಿಕಿತ್ಸಾಕ್ರಮವನ್ನು ಪ್ರಯೋಗಿಸಿ ಅವರ ರೋಗಗಳನ್ನು ವಾಸಿಮಾಡಿದ ಅನೇಕ ನಿದರ್ಶನಗಳನ್ನು ಹೇಳುತ್ತಾನೆ. ಪವಾಡಗಳಂತೆ ಕಂಡುಬರುವ ಅದ್ಭುತವಾದ ರೋಗಚಿಕಿತ್ಸೆ

ಗಳು ಇವುಗಳಲ್ಲಿವೆ. ಎಲ್ಲ ವೈದ್ಯರೂ ಕೈಬಿಟ್ಟ ರೋಗಿಗಳಲ್ಲಿ ಕೆಲವರನ್ನು ತಾನು ಈ ಚಿಕಿತ್ಸಾ ಕ್ರಮದಿಂದ ಬದುಕಿಸಿದುದಾಗಿ ಹೇಳುತ್ತಾನೆ. ಇದಕ್ಕಾಗಿ ಇವನು ಅನುಸರಿಸುವ ಕ್ರಮ ಬಹು ಸರಳವಾದದ್ದು. ರೋಗಿಗೆ ತಾನು ದಿನದಿನಕ್ಕೂ ಗುಣಮುಖ ನಾಗುತ್ತಿರುವನೆಂದೂ, ತನ್ನಲ್ಲಿ ನಿಜವಾಗಿಯೂ ಅಂತಹ ಪ್ರಬಲವಾದ ರೋಗವಿಲ್ಲವೆಂದು ನಂಬಬೇಕೆಂದೂ ಸಲಹೆ ಮಾಡುತ್ತಾನೆ. ಈ ರೀತಿ ಸಲಹೆಯನ್ನು ರೋಗಿಯು ಸ್ವೀಕರಿಸಿ ಸದಾಕಾಲದಲ್ಲಿಯೂ ಮನನಮಾಡುತ್ತಾನೆ. ಇದರಿಂದ ಕಾಲಕ್ರಮದಲ್ಲಿ ಅವನು ಗುಣಹೊಂದುತ್ತಾನೆ. ಇಂತಹ ನಿದರ್ಶನಗಳಿಂದ ಮನಸ್ಸಿಗೂ ದೇಹಕ್ಕೂ ಇರತಕ್ಕ ನಿಕಟವಾದ ಸಂಬಂಧವು ಸ್ಪಷ್ಟವಾಗುತ್ತದೆ. ಸ್ವಯಂಪ್ರೇರಣೆಯನ್ನು ಕುರಿತು ಅನೇಕ ಗ್ರಂಥಗಳನ್ನು ಬರೆದಿರುವ 'ಲೂಯಿ ಆರ್ಟನ್' ಎಂಬ ಮತ್ತೊಬ್ಬ ಪಂಡಿತನು ಯೂರೋಪ್ ದೇಶದ ಇತಿಹಾಸ ದಿಂದ ಒಂದು ಆಶ್ಚರ್ಯಕರವಾದ ಪ್ರಸಂಗವನ್ನು ಉದಾಹರಿ ಸುತ್ತಾನೆ. ೧೬೨೫ರಲ್ಲಿ ಹಾಲೆಂಡ್ ದೇಶದ 'ಬ್ರೆಡಾ' ಎಂಬ ಪಟ್ಟಣವು ಸ್ಪೈನ್ ದೇಶದ ಸೈನ್ಯಗಳ ನಾಯಕನಾದ ಸ್ಪಿನೋಲಾ ಎಂಬುವನಿಗೆ ವಶವಾಗುವುದರಲ್ಲಿತ್ತು. ಅವನ ಸೈನ್ಯಗಳು ಪಟ್ಟಣಕ್ಕೆ ಮುತ್ತಿಗೆ ಹಾಕಿರುವಾಗ ಅಲ್ಲಿನ ಜನರಿಗೆ ಸ್ಕರ್ವಿ ಎಂಬ ಒಂದು ಅಂಟುರೋಗ ತಗುಲಿ ಅನೇಕಜನ ಬಹುಬೇಗ ಸಾಯುತ್ತಿದ್ದರು. ಇಂತಹ ಸಂದರ್ಭದಲ್ಲಿ 'ಆರೆಂಜಿನ' ರಾಜಕುಮಾರನು ಒಂದು ಕೆಂಪು ಔಷಧಿಯ ಸೀಸೆಯನ್ನು ಕಳುಹಿಸಿ ಅದನ್ನು ಕುಡಿಯುವ ನೀರಿಗೆ ಬೆರೆಸಿದರೆ ರೋಗವು ಹರಡುವುದಿಲ್ಲವೆಂದೂ, ಅವರು ಧೈರ್ಯವಾಗಿ ಹೋರಾ ಡಬಹುದೆಂದು ಸೂಚನೆಯಿತ್ತನು. ಈ ಔಷಧ ಮಿಶ್ರಿತವಾದ

ದ್ರಾಕ್ಷಾರಸ ಅಥವಾ ನೀರನ್ನು ಕುಡಿದಮೇಲೆ ಆ ರೋಗದ ಸೋಂಕು ಸಂಪೂರ್ಣವಾಗಿ ಮಾಯವಾಗಿ ಊರಿನ ಜನರು, ಸೈನಿಕರು ಮತ್ತೆ ಉತ್ಸಾಹಭರಿತರಾಗಿ ಹೋರಾಡಿದರು. ಇದರ ಯಥಾರ್ಥ ರಹಸ್ಯವೇನೆಂದರೆ ಆ ಕೆಂಪು ಔಷಧಿ ಬರಿಯ ಕೆಂಪುಬಣ್ಣ ಮಿಶ್ರಿತವಾದ ನೀರುಮಾತ್ರ. ಇದು ಪ್ರತಿಯೊಬ್ಬ ಸೈನಿಕನಲ್ಲಿಯೂ ಸ್ವಯಂಪ್ರೇರಣೆಯ ಫಲವಾಗಿ ಉಂಟಾದ ಪರಿಣಾಮಕ್ಕೆ ನಿದರ್ಶನವೆಂದು ಈ ಗ್ರಂಥಕರ್ತನ ಮಾತು. ಇಂಗ್ಲಿಷ್ ಸಾಹಿತ್ಯದಲ್ಲಿ ಪ್ರಖ್ಯಾತನಾದ ಆಲಿವರ್ ಗೋಲ್ಡ್ ಸ್ಮಿತ್ ಕವಿಯು ಒಮ್ಮೆ ಒಂದು ಭೋಜನಗೃಹದಲ್ಲಿ ಲೂಟಿ ಮಾಡುತ್ತಿದ್ದನು. ಅಲ್ಲಿ ಬಡಿಸುತ್ತಿದ್ದವನು ಮಾಂಸದಿಂದ ಮಾಡಿದ ಒಂದು ಅಡುಗೆಯನ್ನು ಇವನ ಮುಂದೆ ತಂದಿಟ್ಟನು. ಆಗ ಗೋಲ್ಡ್‌ಸ್ಮಿತ್ ಕವಿಯ ಪಕ್ಕದಲ್ಲಿ ಕುಳಿತಿದ್ದ ಒಬ್ಬ ವ್ಯಕ್ತಿಯು ಮೂಗು ಮುರಿದು ಇಂತಹ ದುರ್ವಾಸನೆಯಿಂದ ಕೂಡಿದ ಆಹಾರವನ್ನು ತಿನ್ನುವುದಕ್ಕೆ ನಿನಗೆ ಅಸಹ್ಯವಾಗುವು ದಿಲ್ಲವೆ? ಎಂದು ಕೇಳಿದನು. ಗೋಲ್ಡ್‌ಸ್ಮಿತ್‌ನು ತನಗೆ ಅಂತಹ ದುರ್ವಾಸನೆ ಏನೂ ಬರುತ್ತಿಲ್ಲವೆಂದು ಹೇಳಿದನು. ಮತ್ತೆ ಆ ವ್ಯಕ್ತಿಯು ಆ ಅಡುಗೆಯಲ್ಲಿ ಉಪಯೋಗಿಸಿರುವ ಕೊಳೆತ ಮಾಂಸದ ವಾಸನೆ ತನಗೆ ಅಷ್ಟು ದೂರದಿಂದಲೇ ಬಂದಿತೆಂದೂ, ತನಗೇನಾದರೂ ಅಂತಹ ಅಡುಗೆಯನ್ನು ಬಡಿಸಿ ದ್ದಿದ್ದರೆ, ಬಡಿಸಿದವನನ್ನು ತಾನು ಎಲುಬು ಮುರಿಯುವಂತೆ ಬಡಿಯುತ್ತಿದ್ದನೆಂದು ಹೇಳಿದನು. ಇದರಿಂದ ಗೋಲ್ಡ್‌ಸ್ಮಿತ್ ಕವಿಗೆ ಅದು ನಿಜವಾಗಿಯೂ ಕೊಳೆತ ಮಾಂಸವೆಂದು ನಂಬಿಕೆ ಹುಟ್ಟಿ ಆ ವಾಸನೆ ತನ್ನ ಮೂಗಿಗೆ ಸ್ಪಷ್ಟವಾಗಿ ಬರುತ್ತಿದ್ದಂತೆ ಭಾಸವಾಯಿತು. ಬಹಳ ಕೋಪದಿಂದ ತನಗೆ ಅದನ್ನು

ಬಡಿಸಿದವನನ್ನು ಕರೆದು ಅವನೇ ಅದನ್ನು ತಿನ್ನಬೇಕೆಂದು ಆಜ್ಞೆ ಮಾಡಿದನು. ಬಡಿಸಿದವನಿಗೆ ಇದರ ಕಾರಣ ಅರ್ಥ ವಾಗದೆ ಗೋಲ್ಡ್‌ಸ್ಮಿತ್ ಕವಿ ಹೇಳಿದಂತೆಯೇ ಮಾಡಿದನು. ಅವನು ತಿಂದು ಹೊರಟುಹೋದಮೇಲೆ ಪಕ್ಕದಲ್ಲಿ ಕುಳಿತ್ತಿದ್ದ ವ್ಯಕ್ತಿಯು ಗೋಲ್ಡ್‌ಸ್ಮಿತ್ ಕವಿಯ ಮುಖವನ್ನು ನೋಡಿ ನಗಲು ಪ್ರಾರಂಭಿಸಿದನು. ಆ ವ್ಯಕ್ತಿಯ ವಿಚಿತ್ರವರ್ತನೆ ಗೋಲ್ಡ್‌ಸ್ಮಿತ್‌ನಿಗೆ ಅರ್ಥವಾಗಲಿಲ್ಲ. ಆಗ ಆ ವ್ಯಕ್ತಿಯೇ ತನ್ನ ನಗುವಿಗೆ ಕಾರಣವನ್ನು ಹೇಳಿದನು. “ನೀನು ಪ್ರಖ್ಯಾತ ಕವಿಯಾದರೂ, ಇಂತಹ ಸಾಮಾನ್ಯ ವಿಷಯಗಳಲ್ಲಿ ನಿನಗೆ ಲೋಕಾನುಭವ ಬಹಳ ಕಡಿಮೆ ಎಂಬುದಕ್ಕೆ ಇದೇ ನಿದರ್ಶನ” ಎಂದು ಗೋಲ್ಡ್‌ಸ್ಮಿತ್‌ನನ್ನು ಹಾಸ್ಯ ಮಾಡಿದನು. ಈ ಮೇಲಿನ ಎರಡು ಉದಾಹರಣೆಗಳಿಂದ ಒಂದೆರಡು ವಿಷಯಗಳು ಸ್ಪಷ್ಟವಾಗುತ್ತವೆ. ಸ್ವಯಂಪ್ರೇರಣೆ ಎಂಬುದು ಪೂರ್ಣವಾಗಿ ಸ್ವಯಂಪ್ರೇರಣೆಯಲ್ಲ. ಅದು ಮೂಲತಃ ಪರಪ್ರೇರಣೆಯೇ. ಎಂದರೆ ಒಬ್ಬ ವ್ಯಕ್ತಿ ತನ್ನಲ್ಲಿ ತಾನೇ ಪ್ರೇರಣೆಯನ್ನು ಕಲ್ಪಿಸಿ ಕೊಂಡಿಲ್ಲ. ಪ್ರೇರಣೆ ಮೊದಲು ಬೇರೊಬ್ಬರಿಂದ ಬಂದದ್ದು. ಅನಂತರ ಅದು ಪ್ರಬಲವಾಗಿ ಬೇರೂರಿ ಆ ವ್ಯಕ್ತಿಯ ಮನಸ್ಸಿನ ಮೇಲೆ, ದೇಹದ ಮೇಲೆ ತೀವ್ರವಾದ ಪರಿಣಾಮವನ್ನು ಉಂಟು ಮಾಡುತ್ತದೆ. ಅಲ್ಲದೆ ಸ್ವಯಂಪ್ರೇರಣೆ ಎನಿಸಿಕೊಳ್ಳುವ ನಾನಾ ಸನ್ನಿವೇಶಗಳು ನಿಜವಾಗಿಯೂ ಮೇಲೆ ಹೇಳಿದ, ಬಾರಿ ಬಾರಿಗೂ ಒಂದು ಅಭಿಪ್ರಾಯವನ್ನು ಪ್ರೇರಿಸುವ ತಂತ್ರಕ್ಕೆ ಸರಿಹೋಲುತ್ತವೆ.

ಕೆಲವು ಮನೋವಿಜ್ಞಾನಿಗಳು ಸ್ವಯಂಪ್ರೇರಣೆಗೆ ಆ ಹೆಸರು ಉಚಿತವಲ್ಲವೆಂದು ವಾದಿಸುತ್ತಾರೆ. ಏಕೆಂದರೆ

ಯಥಾರ್ಥವಾಗಿ ನೋಡಿದರೆ ಪ್ರೇರಣೆ ಪ್ರಾರಂಭದಲ್ಲಿ ಬೇರೊಬ್ಬರಿಂದ ಬರುತ್ತದೆ. 'ಕೂ-ಎ' ತನ್ನ ರೋಗಿಗಳಿಗೆ ಮಾಡಿದ ಸಲಹೆ, ಮೊದಲು ಆತನಿಂದ ಬಂದುದೇ ಹೊರತು ರೋಗಿಗಳು ತಾವಾಗಿ ತಮ್ಮಲ್ಲಿಯೇ ಪ್ರೇರಿಸಿಕೊಂಡುದಲ್ಲ. ಆ ಮೇಲೆ ಕೂಡ ಅವರು ಅವನು ಕೊಟ್ಟ ಸಲಹೆಯನ್ನು ಮನನಮಾಡುವಾಗ 'ಕೂ-ಎ' ಅವರೆದುರಿಗೆ ಇಲ್ಲದಿದ್ದರೂ ಅವನ ವ್ಯಕ್ತಿತ್ವದ ಪ್ರಭಾವ, ಸ್ಮರಣೆ ಇವುಗಳು ಪ್ರಬಲವಾಗಿದ್ದು, ಅವನು ಎದುರಿಗಿದ್ದಷ್ಟೇ ಪರಿಣಾಮಕಾರಿಯಾಗುತ್ತದೆ. ಇದರಿಂದ ಸ್ವಯಂ ಪ್ರೇರಣೆ ಎಂಬ ಹೆಸರು ನ್ಯಾಯವಾಗಿ ಸಲ್ಲತಕ್ಕುದ್ದಲ್ಲ. ಇವಲ್ಲದೆ ಯಾವ ಒಂದು ಮಾನಸಿಕ ವ್ಯಾಪಾರಕ್ಕೂ ಎರಡು ಬೇರೆ ವಸ್ತುಗಳಿದ್ದು ಅವುಗಳ ನಡುವೆ ಸಂಪರ್ಕವೇರ್ಪಡಬೇಕು. ಒಂದು ವಸ್ತುವಿನ ಜ್ಞಾನಉಂಟಾಗುವಾಗ ಮೊದಲು ಅದನ್ನು ತಿಳಿಯಲು ಒಬ್ಬ ಜ್ಞಾತೃವಿರಬೇಕು. ಹಾಗೆಯೇ ತಿಳಿಯಬೇಕಾಗಿರುವ ವಸ್ತುವೆನಿಸುವ ಜ್ಞೇಯವೂ ಇರಬೇಕು. ಇವೆರಡರ ನಡುವೆ ಉಂಟಾದ ಸಂಬಂಧದ ರೂಪವಾಗಿ ಜ್ಞಾನವೇರ್ಪಡುತ್ತದೆ. ಇದನ್ನು ವೇದಾಂತದಲ್ಲಿ "ತ್ರಿಪುಟೀ ಪ್ರತ್ಯಕ್ಷ"ವೆನ್ನುತ್ತಾರೆ. ಹಾಗೆಯೇ ಪ್ರೇರಣೆಯಲ್ಲಿಯೂ ಸಹ ಪ್ರೇರಣೆಯನ್ನುಂಟುಮಾಡುವ ಪ್ರೇರಕನೂ ಪ್ರೇರಣೆಗೆ ಒಳಪಡುವ ಪ್ರೇರಿತನೂ, ಇವರಿಬ್ಬರ ನಡುವೆ ಉಂಟಾದ ಸಂಬಂಧವಾಗಿ ಪ್ರೇರಣೆಯೂ ಇರಬೇಕು. ಎಂದ ಮೇಲೆ ಒಬ್ಬನೇ ವ್ಯಕ್ತಿ ಪ್ರೇರಕನೂ, ಪ್ರೇರಿತನೂ ಆಗುವುದು ಅಸಾಧ್ಯ. ಆದುದರಿಂದ ಸ್ವಯಂಪ್ರೇರಣೆ ಎಂಬುದು ಅರ್ಥವಿಲ್ಲದ ಮಾತು. ಎಲ್ಲ ಬಗೆಯ ಪ್ರೇರಣೆಯು ಪರಪ್ರೇರಣೆಯೇ ಹೊರತು ಸ್ವಯಂ ಪ್ರೇರಣೆ ಎಂಬುದಿಲ್ಲ

ಎಂದು ಕೆಲವು ಮನೋವಿಜ್ಞಾನಿಗಳ ಮತ. ಇದರ ಸಮರ್ಥನೆಗೆ ಅವರು ಕೆಲವು ನಿದರ್ಶನಗಳನ್ನು ಕೊಡುವುದುಂಟು. ಒಬ್ಬ ವ್ಯಕ್ತಿ ತಾನು ಹಿಡಿದ ಕೆಲಸವನ್ನು ಸಾಧಿಸುವನೆಂದು ತನ್ನ ಮನಸ್ಸಿನಲ್ಲಿಯೇ ಪ್ರೇರಣೆ ಮಾಡಿಕೊಂಡರೆ ಅವನು ಖಂಡಿತವಾಗಿ ತನ್ನ ಯತ್ನದಲ್ಲಿ ಜಯಗಳಿಸುತ್ತಾನೆ. ಅದಕ್ಕೆ ಬದಲು ತಾನು ಯಶಸ್ವಿಯಾಗುವುದಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಂಡರೆ ಅವನಿಗೆ ಜಯ ಲಭಿಸಲಾರದು. ಇದು ಸ್ವಯಂಪ್ರೇರಣೆಯ ಫಲವೆಂದು ಸಾಮಾನ್ಯವಾಗಿ ಹೇಳುವವರಿದ್ದಾರೆ. ಆದರೆ ಇಂತಹ ಸನ್ನಿವೇಶಗಳನ್ನು ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸಿದರೆ ಇಲ್ಲಿಯೂ ಕೂಡ ಪರಪ್ರೇರಣೆಯೇ ಬೇರೊಂದು ರೂಪದಲ್ಲಿದೆಯೆಂದು ಸ್ಪಷ್ಟವಾಗುತ್ತದೆ. ಏಕೆಂದರೆ ಒಬ್ಬ ವ್ಯಕ್ತಿಯು ತಾನು ಹಿಡಿದ ಕೆಲಸದಲ್ಲಿ ಯಶಸ್ಸು ಪಡೆಯಲಾರನೆಂದು ಅಂದುಕೊಳ್ಳುವನೆಂದು ಭಾವಿಸೋಣ. ಇಂತಹ ಪ್ರೇರಣೆ ಅವನ ಹೊರಮನಸ್ಸು ಒಳಮನಸ್ಸಿಗೆ ಮಾಡುತ್ತದೆ. ಇದರ ಫಲವಾಗಿ ಒಳಮನಸ್ಸು ಹೊರಮನಸ್ಸಿನ ಆ ಪ್ರೇರಣೆಗೆ ಅನುಸಾರವಾಗಿ ಕಾರ್ಯಸಾಧನೆಗೆ ವಿರೋಧವಾದ ಮಾರ್ಗದಲ್ಲಿಯೇ ಕೆಲಸ ಮಾಡುತ್ತದೆ. ಈ ಕಾರಣದಿಂದ ಹೊರಮನಸ್ಸು ಕಾರ್ಯಸಾಧನೆಗೆ ಎಷ್ಟು ಪ್ರಯತ್ನಿಸಿದರೂ, ಅಜ್ಞಾತವಾಗಿ ಒಳಮನಸ್ಸು ಅದನ್ನು ಪ್ರತಿಭಟಿಸಿ, ಕಾರ್ಯಸಾಧನೆಗೆ ವಿನಿಯೋಗಿಸಬೇಕಾಗಿರುವ ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಅದಕ್ಕೆ ವಿರೋಧವಾಗಿ ಉಪಯೋಗಿಸುತ್ತದೆ. ಹೀಗಾಗುವುದರಿಂದ ಆ ವ್ಯಕ್ತಿಯು ತಾನು ಹಿಡಿದ ಕೆಲಸದಲ್ಲಿ ಜಯಪಡೆಯುವುದಿಲ್ಲ. ಇಲ್ಲಿ ಮೇಲುಗಡೆ ತೋರಿಕೆಗೆ

ಸ್ವಯಂಪ್ರೇರಣೆಯಂತೆ ಕಂಡರೂ ವಾಸ್ತವವಾಗಿ ಇದು ಪರ ಪ್ರೇರಣೆ. ಏಕೆಂದರೆ ಇಲ್ಲಿಯೂ ಕೂಡ ಹೊರಮನಸ್ಸು ಪ್ರೇರಕ. ಒಳ ಮನಸ್ಸು ಪ್ರೇರಿತ. ಮೇಲಿನ ಕಾರಣಗಳಿಂದ ಸ್ವಯಂಪ್ರೇರಣೆ ಎಂಬ ಹೆಸರು ಯಾವ ಬಗೆಯ ಪ್ರೇರಣೆಗೂ ಸಲ್ಲಲಾರದು ಎಂದು ಸ್ಪಷ್ಟವಾಗುತ್ತದೆ. (ಕೂ-ಎ ತನ್ನ ಕ್ರಮಕ್ಕೆ ಈ ಹೆಸರನ್ನು ಕೊಟ್ಟಿದ್ದು ಅಷ್ಟು ಉಚಿತವಲ್ಲವೆಂಬ ಮನೋವಿಜ್ಞಾನಿಗಳ ವಾದ ಸೂಕ್ತವೆಂದು ತೋರುತ್ತದೆ.)

ಕೂ-ಎ ತನ್ನ 'ಸ್ವಯಂಪ್ರೇರಣೆಯ ಕ್ರಮದಲ್ಲಿ ಯೋಗಾಭ್ಯಾಸದ ಕ್ರಮಕ್ಕೆ ಸರಿಹೋಲುವಂತಹ ಕೆಲವು ನಿಯಮಗಳನ್ನು ಗೊತ್ತುಪಡಿಸಿದ್ದನು. ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವನದಲ್ಲಿ ಉನ್ನತ ಸ್ಥಿತಿಯನ್ನು ಮುಟ್ಟಲು ಅನುಕೂಲವಾಗುವಂತೆ ಒಂದು ಬಹು ಸುಲಭಮಾರ್ಗವನ್ನು ಆತನು ತೋರಿಸಿಕೊಟ್ಟನು. ಅದೇನೆಂದರೆ ಪ್ರತಿಯೊಬ್ಬ ವ್ಯಕ್ತಿಯು ತಾನು ಒಂಟಿಯಾಗಿರುವಾಗ ತನ್ನ ಮನಸ್ಸಿನಲ್ಲಿಯೇ "ನಾನು ದಿನ ದಿನಕ್ಕೂ ಎಲ್ಲವಿಧದಲ್ಲಿಯೂ ಉತ್ತಮಗೊಳ್ಳುತ್ತಿದ್ದೇನೆ" ಎಂಬ ಮಂತ್ರವನ್ನು ಜಪಿಸುತ್ತಿರಬೇಕೆಂಬುದೇ ಆತನ ಸಲಹೆ. ಹೀಗೆ ಮಾಡುವಾಗ ಧ್ಯಾನದಲ್ಲಿರುವವರು ಜಪಸರದ ಮಣಿಗಳನ್ನೆಣಿಸುವಂತೆ ಒಂದು ದಾರಕ್ಕೆ ಗಂಟು ಹಾಕಿ ಅವುಗಳನ್ನೆಣಿಸುತ್ತಿರುವುದು ಸಹಕಾರಿ ಎಂದು ಆತನ ಅಭಿಪ್ರಾಯ. ಈ ಬಗೆಯ ನಿಯಮದ ಮೂಲತತ್ವದ ವಿಷಯದಲ್ಲಿ ಯಾವ ವಿಧವಾದ ಭಿನ್ನಾಭಿಪ್ರಾಯವೂ ಇರಲಾರದಾದರೂ, ಸ್ವಯಂಪ್ರೇರಣೆಯನ್ನು ಇಷ್ಟು ಯಾಂತ್ರಿಕವಾದ ರೀತಿಯಲ್ಲಿ ನಡೆಸಬೇಕಾದ ಆವಶ್ಯಕತೆ ಅಥವಾ ಔಚಿತ್ಯ ಅರ್ಥವಾಗುವುದಿಲ್ಲ. ಕೆಲವು ಮನೋವಿಜ್ಞಾನಿಗಳು ಸೂಚಿಸಿರುವಂತೆ ಈ ಬಗೆಯ

ಮಂತ್ರವನ್ನು ನಿತ್ಯವೂ ಜಪಿಸಿ ಸಾಫಲ್ಯತೆಯನ್ನು ಪಡೆಯುವ ವ್ಯಕ್ತಿಗಳೂ ಕೂಡ ಸ್ವಯಂ ಪ್ರೇರಣೆಯ ನಿದರ್ಶನಗಳಲ್ಲ. ಏಕೆಂದರೆ, ಅವರು ಆ ಮಂತ್ರವನ್ನು ಪಡೆದುದು 'ಕೂ-ಎ' ಎಂಬ ಬೇರೊಬ್ಬರಿಂದ ಅಲ್ಲದೆ ಅವರು ಅದನ್ನು ಜಪಿಸುವಾಗ ತಮ್ಮ ಮೇಲೆ ಬಹಳ ಪ್ರಭಾವವನ್ನು ಬೀರುವ ಮತ್ತು ತಮ್ಮ ವಿಶ್ವಾಸಕ್ಕೆ ಪಾತ್ರನಾದ ಕೂ-ಎ ಯ ವ್ಯಕ್ತಿತ್ವವನ್ನು ನೆನೆಸಿ ಕೊಳ್ಳುತ್ತಾರೆ. ಆದುದರಿಂದ ಸ್ವಯಂಪ್ರೇರಣೆ ನಿಜವಾಗಿಯೂ ದೈಹಿಕವಾಗಿ, ಪ್ರತ್ಯಕ್ಷವಾಗಿರದಿದ್ದರೂ, ಅಗೋಚರನಾದ ಕೂ-ಎ ಇಂದಲೇ ಎಂದಮೇಲೆ, ಇಂತಹ ಸ್ವಯಂಪ್ರೇರಣೆ ಎಂದು ಹೇಳಲಾಗುವ ಸನ್ನಿವೇಶಗಳೂ ಕೂಡ ಪರ ಪ್ರೇರಣೆಯೆ ಎಂಬುದು ಸ್ಪಷ್ಟವಾಗುತ್ತದೆ.

ಶಬ್ದಕೋಶ

Conscious mind : ಹೊರಮನಸ್ಸು

Sub Conscious mind : ಒಳಮನಸ್ಸು

Suggestion : ಪ್ರೇರಣೆ

Hypnosis : ಕೃತಕ ನಿದ್ರೆ

Rapport : ಮನಸ್ಸಂಯೋಗ

Amnesia : ಸ್ಮೃತಿನಾಶ, ವಿಸ್ಮೃತಿ

Posthypnotic amnesia : ಕೃತಕ ನಿದ್ರಾನಂತರದ ವಿಸ್ಮೃತಿ

The Law of Reversed Effort : ವಿಪರೀತ ಯತ್ನ ನಿಯಮ

Psycho-analysis : ಮನೋ ವಿಶ್ಲೇಷಣ

Auto-Suggestion : ಸ್ವಯಂಪ್ರೇರಣೆ

Hetero Suggestion : ಪರಪ್ರೇರಣೆ

WO 258—MUPM—3000 copies 25-11-1959

೨೬. ಸಾರಜನಕದ ಮಹತ್ವ—ಎಚ್. ಸುಬ್ಬಾಜೋಯಿಸ್
೨೭. ಭಾಸ—ಡಾ॥ ಎಚ್. ಎಲ್. ಹರಿಯಪ್ಪ
೨೮. ಪಾಶ್ಚಾತ್ಯ ರಾಜಕೀಯ ತತ್ವಗಳು—ಎಂ. ಯಾಮುನಾಚಾರ್ಯ
೨೯. ಸರ್ವಜ್ಞ ಕವಿ—ಎ. ಆರ್. ಕೃಷ್ಣಶಾಸ್ತ್ರೀ
೩೦. ರಕ್ತ—ಡಿ. ಶಾಮಣ್ಣ
೩೧. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೩೨. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೩೩. ಗಣಿತಶಾಸ್ತ್ರದ ಸ್ವರೂಪ
—ಡಾ॥ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್
೩೪. ಋಗ್ವೇದ—ಎಂ. ಎ. ಕೃಷ್ಣಸ್ವಾಮಿ
೩೫. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೩೬. ಆಳ್ವಾರುಗಳು—ಎಂ. ಯಾಮುನಾಚಾರ್ಯ
೩೭. ಹಿಂದು ಮುಸ್ಲಿಂ ಮೈತ್ರಿಯನ್ನು ಬೆಳೆಸಿದ ರಾಜರು
—ವಿ. ರಾಘವೇಂದ್ರರಾವ್
೩೮. ಸುಭಾಷಿತ ಸಂಗ್ರಹಗಳು—ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ
೩೯. ಮಕ್ಕಳ ಭಾವಜೀವನ—ಡಾ॥ ಬಿ. ಕುಪ್ಪುಸ್ವಾಮಿನಾಯಿಡು
೪೦. ಸಹಕಾರ—ಎಸ್. ಗೋಪಾಲಸ್ವಾಮಿ
೪೧. ನಯಸೇನ—ಜಿ. ವೆಂಕಟಸುಬ್ಬಯ್ಯ
೪೨. ಕೌಟಿಲ್ಯ—ಡಾ॥ ಎಂ. ವಿ. ಕೃಷ್ಣರಾವ್
೪೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೪೪. ಮುನಿಸಿಪಾಲಿಟಿಗಳು—ಎಚ್. ಕೃಷ್ಣರಾವ್
೪೫. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೪೬. ರುಚಿ—ಎಸ್. ವಿ. ರಂಗಣ್ಣ
೪೭. ಕೀಟಗಳು—ಡಿ. ಎಸ್. ವೀರಯ್ಯ
೪೮. ಅಲೆಗಳು—ಕೆ. ಶೇಷಾದ್ರಿ ಅಯ್ಯಂಗಾರ್
೪೯. ಮುದ್ದಣ—ಟಿ. ಎಸ್. ಶಾಮರಾವ್
೫೦. ಐವರು ಭೌತ ವೈಜ್ಞಾನಿಕರು—ಬಿ. ಎ. ಕೃಷ್ಣಸ್ವಾಮಿರಾವ್
೫೧. ಕೃತಕರೇಷ್ಮೆ—ಎಂ. ಷಡಕ್ಷರಸ್ವಾಮಿ
೫೨. ಚೀನರ ಇತಿಹಾಸ ಮತ್ತು ನಾಗರಿಕತೆ
—ಎಸ್. ವೆಂಕಟದೇಶಿಕಾಚಾರ್

೫೩. ಯುದ್ಧಕಾಲದ ಆರ್ಥಿಕ ಸಮಸ್ಯೆಗಳು
—ಎಸ್. ಲಕ್ಷ್ಮೀನರಸಿಂಹನ್

೫೪. ಆಹಾರ—ಜಿ. ಆರ್. ಲಕ್ಷ್ಮಣರಾವ್

೫೫. ಇಬ್ಸನ್ನಿನ ಕೆಲವು ನಾಟಕಗಳು—ಎಸ್. ಮಂಜುನಾಥ್

೫೬. ಶಬ್ದಪ್ರಪಂಚ—ಆರ್. ಎಲ್. ನರಸಿಂಹಯ್ಯ

೫೭. ಪ್ರಜಾಭಿಪ್ರಾಯ—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್

೫೮. ಕಲ್ಲಿದ್ದಲು—ಕೆ. ಎಸ್. ಲಕ್ಷ್ಮಣರಾವ್

೫೯. ಜನಪದಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್

೬೦. ಹಾಲು—ಕೆ. ಎಸ್. ಲಕ್ಷ್ಮಣರಾವ್

೬೧. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ

೬೨. ಭಾರತದಲ್ಲಿ ಪ್ರಜಾಪ್ರಭುತ್ವ
—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್

೬೩. ಆರೋಗ್ಯಸಾಧನೆ—ಮೊಟಗಾನಹಳ್ಳಿ ಮಹದೇವಶಾಸ್ತ್ರೀ

೬೪-೬೫ ಆಧುನಿಕ ಭಾರತದಲ್ಲಿ ನೃತ್ಯಕಲೆ—ಯು. ಎಸ್. ಕೃಷ್ಣರಾವ್
ಮತ್ತು ಚಂದ್ರಭಾಗಾದೇವಿ

ಸಾದಾ ಪ್ರತಿ ೫೦ ನ. ಪೈಸೆ ; ಉತ್ತಮ ಪ್ರತಿ ೭೫ ನ. ಪೈಸೆ

೬೬. ಚುನಾವಣೆಗಳು—ಗ. ಸ. ಹಾಲಪ್ಪ

೬೭. ಮೀನಿನಿಂದ ಮಾನವನೆಡೆಗೆ—ಎಚ್. ಬಿ. ದೇವರಾಜಸರ್ಕಾರ್

೬೮. ಕ್ಷಯ—ಡಾ|| ಎಸ್. ಟಿ. ಪುಟ್ಟಣ್ಣ

೬೯. ಶಿಲ್ಪಿಯ ಪಾತ್ರ—ಬಿ. ಎಲ್. ಸಿ. ರಾಜನ್

೭೦. ಪರತಂತ್ರ ಜೀವಿಗಳು ಮತ್ತು ಪರತಂತ್ರ ಜೀವನ
—ಎಚ್. ಬಿ. ದೇವರಾಜ ಸರ್ಕಾರ್

೭೧. ಮಾನವ ಹಕ್ಕುಗಳು—ಹೆಚ್. ಎಂ. ಸದಾಶಿವಯ್ಯ

೭೨. ವಿನೋದ ಗಣಿತ—ವಿ. ಕೆ. ದೊರೆಸ್ವಾಮಿ

೭೩. ಸಾಬೂನು—ಕೆ. ಎಸ್. ಲಕ್ಷ್ಮಣರಾವ್

೭೪. ಉಷ್ಣಯಂತ್ರಗಳ ಪರಿಚಯ—ಕೆ. ವಿ. ಸುಬ್ಬರಾಯ

೭೫. ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ—ಶ್ರೀ ನಾಗಭೂಷಣಂ

ಸಾದಾ ಪ್ರತಿ ೨೫ ನ. ಪೈಸೆ ; ಉತ್ತಮ ಪ್ರತಿ ೩೭ ನ. ಪೈಸೆ

---

* ಈ ಪುಸ್ತಕ ಅಚ್ಚಿನಲ್ಲಿದೆ